ಅಪರಂಜಿ

ನವೆಂಬರ್ 99

ತಿಳಿನಗೆಯ ಕಾರಂಜಿ

ಪ್ರಕಾಶ್

ಕೃಷ್ಣಸುಬ್ಬರಾವ್

ನಾಗೂಶ್ರೀ ಸೂರಿ

ಶಿವು

ಹೆಚ್. ಗೋಪಾಲಕೃಷ್ಣ

ಕ.ಬ. ವೀರಣ್ಣ ಕಣ್ಣಾಗಾಲ

ಎಂ.ಎಸ್.ಕೆ.

ಶೋಭಾ ಪ್ರಮೋದ್

ಡಾ॥ ಹೆಚ್.ಎಸ್. ವೆಂಕಟೇಶ್

ಕು.ಗೋ.



ಬಿಡಿ ಪ್ರತಿ: ರೂ. 5.00



ಶುಭಾಶಯಗಳೊಂದಿಗೆ

ವಿಜಯಾ ಮತ್ತು ಅನಂದ್ ದೇಸಾಯ್

ಆಸ್ಟಿನ್, ಟೆಕ್ಸಸ್



ಗೌರವ ಸಲಹೆಗಾರರು:
ಶ್ರೀ ಅ. ರಾ. ಸೇ.
ಶ್ರೀ ಶೇಷಗಿರಿ
ಸಂಪಾದಕ:
ಶಿವಕುಮಾರ್
ನಿರ್ವಹಣೆ:
ಬೇಲೂರು ರಾಮಮೂರ್ತಿ
ಕೃಷ್ಣ ಸುಬ್ಬರಾವ್

ಚಂದಾ ವಿವರ:
ಬಿಡಿ ಪ್ರತಿ: ರೂ. 5.00
ವಾರ್ಷಿಕ ಚಂದಾ: ರೂ. 60
ಹತ್ತು ವರ್ಷದ ಚಂದಾ : ರೂ. 500

ವಿಳಾಸ: ಕೊರವಂಜಿ ಅಪರಂಜಿ ಟ್ರಸ್ಟ್, 36, 6ನೇ ಮುಖ್ಯ ರಸ್ತೆ, ಮಲ್ಲೇಶ್ವರಂ, ಬೆಂಗಳೂರು-560 003 (ಕೆಲಸದ ವೇಳೆ: ಬೆಳಿಗ್ಗೆ 8 ರಿಂದ 10 ಗಂಟೆಯವರೆಗೆ)

ಈ ಸಂಚಿಕೆಯಲ್ಲಿ

ಸಂಪುಟ 17 ನವೆಂಬರ್- 99 ಸಂಚಿಕೆ - 2

ಮುದ್ರಣ: ಇಂಪ್ರೆಶನ್ಸ್, ಬೆಂಗಳೂರು - 3 ಅಕ್ಷರ ಜೋಡಣೆ: ಒಮೇಗಾ ಲೇಸರ್ ಟೆಕ್, ಬೆಂಗಳೂರು 27



ಅಪರಂಜಿ

(ತಿಳಿನಗೆಯ ಕಾರಂಜಿ)

ಸಂಪುಟ 17 ನವೆಂಬರ್- 99 ಸಂಚಿಕೆ - 2

ಏತಸ್ಮಾದ್ವಿಜ್ಞಾನ ಮಯಾತ್ ಅನ್ಯೋಂತರ ಆತ್ಮಾನಂದಮಯಃ

-ತೈತ್ತಿರೀಯ

ಎಲ್ಲವೂ ವೈಜ್ಞಾನಿಕವಾದ ಹೇಳಿಕೆಗಳು ಎಂದು ಹೇಳುವುದು ಈಗ ಫ್ಯಾಷನ್ ತಾನೇ? ಕಾವೇರಿ ನೀರಿನ ಹಂಚಿಕೆಯನ್ನು ಕುರಿತು ವೈಜ್ಞಾನಿಕವಾಗಿ ಅರೆಹಗಲಿನಲ್ಲಿ ಪರಿಶೀಲಿಸಿ ವರದಿ ನೀಡಿದರು ಎಂಬುದೊಂದು ಉದಾಹರಣೆ.

ವಿಜ್ಞಾನವೇ ಬೇರೆ, ವೈಜ್ಞಾನಿಕ ಮನೋಭಾವವೇ ಬೇರೆ ಎಂಬ ಪಟುಚಟುಲ ಮತಿಗಳೂ ಇದ್ದಾರಷ್ಟೇ.

ಇಂತಹ ವಿಜ್ಞಾನ ಅಥವಾ ವೈಜ್ಞಾನಿಕ ಮನೋಭಾವದ ಹಿಂದೆ ಆನಂದಮಯ ಬುದ್ಧಿಯಿದೆ.

ಆನಂದಮಯ ಬುದ್ಧಿ ಎಂದರೆ ಹೋದಬಾರಿ ಸೋತೆವು ಈಬಾರಿ ವಿದೇಶೀ ಮೂಲಗಳೇ ಸ್ವದೇಶೀ ಎಂದು ವಾದಿಸಿ ಗೆದ್ದು ಮಜಾ ಉಡಾಯಿಸೋಣ ಎಂಬ ಜಯಚಂದ ಬುದ್ಧಿ, ಹೇಗೋ ಏನೋ ಮಜಾ ಮಾಡಬೇಕು. ದುಡಿದು ಹೀಗೆ ಮಾಡಲು ಸಾಧ್ಯವಿಲ್ಲವಾದರೆ ಏನೋ ಒಂದು ಜಾದೂ ಮಾಡಿ ತೋರಿಸಿ ದುಡಿದು ಮಜಾ ಮಾಡಬೇಕು ಎಂಬುದೇ ಇದು. ಈ ಬುದ್ಧಿ ಭಾರತೀಯರಿಗೆ ತಲ ತಲಾಂತರದಿಂದ ಬಳುವಳಿ ಬಂದದ್ದು. ಪಠಾಣರು, ಮೊಗಲರು, ಬ್ರಿಟಿಷರು ಬಂದು ಭಾರತದಲ್ಲಿ ಕಾಲೂರಿದ್ದೇ ಇದರಿಂದ. ಈಗ ಬೇರೆಯವರಿಗೂ ಏಕೆ ಛಾನ್ಸು ಕೊಡಬಾರದು!

ದೇಶದಲ್ಲಿ ಇಂತಹ ಬೆಳವಣಿಗೆಯಾಗಿರುವುದೂ, ಭಾರತೀಯರು ಈ ಮಟ್ಟಕ್ಕೆ ಇಳಿದಿರುವುದೂ ಅಪರಂಜಿಗೆ ಕಳವಳವನ್ನುಂಟುಮಾಡಿದೆ.

ಅಪರಂಜಿ ಈಗ ಹದಿನೇಳರಲ್ಲಿ ಕಾಲಿಟ್ಟಿದ್ದಾಳೆ. ಭಾರತದ, ಕರ್ನಾಟಕದ ಮೇಲೆ ಹೇಳಿದ ಮನೋಭಾವಗಳ ಬೆಳವಣಿಗೆಗಳಿಂದ ಅಪರಂಜಿ ವಿಸ್ಮಯ, ಆತಂಕಗಳಿಗೊಳಗಾಗಿದ್ದಾಳೆ. ಆದರೆ ತೈತ್ತಿರೀಯ ಉಪನಿಷತ್ತಿನ ಅಭಿಪ್ರಾಯ ಇಷ್ಟೇ! ಮಾನವನ ಬುದ್ಧಿಕೋಶದೊಳಗೆ ಆನಂದಮಯ ಕೋಶವಿದೆ. ಬ್ರಹ್ಮಾನಂದವೇ ಇಂದ್ರಿಯಗಳ ಆಶೆ ಪೂರ್ತಿಗೊಂಡಾಗ ಅನುಭವಿಸುವ ಸುಖವಾಗಿದೆ. ಇದರಿಂದಲೇ ಜೀವನ ಸುಖ-ದುಃಖಗಳೆಂಬ ದ್ವಂದ್ವಕ್ಕೊಳಗಾಗಿದೆ.



○ ಪ್ರಕಾಶ್

''ಭಾರತ - ಪಾಕ್ ಮಾತುಕತೆ ಪುನರಾರಂಭದ ನಿರೀಕ್ಷೆ''

''ಗಡಿ ಉಲ್ಲಂಘಿಸಿದರೆ ಗುಂಡು; ಎಚ್ಚರಿಕೆ''

ದಿನ ಪತ್ರಿಕೆಯ ಮುಖಪುಟದಲ್ಲಿ ಎರಡೂ ಸುದ್ದಿಗಳು!!

★★★

ನಾಲ್ಕು ಸಾವಿರಕ್ಕೂ ಹೆಚ್ಚುಮಂದಿ ದೇಶಸೇವೆ ಮಾಡಲು ಎಂ.ಪಿ. ಗಳಾಗಲು ಮುನ್ನುಗ್ಗಿದ್ದನ್ನು ನೋಡಿ, ಅಪರಂಜಿ ಸಂತೋಷಪಟ್ಟಳಂತೆ!!

★★★

''ಓಟು ಕೇಳುವಾಗ 'ಮತ ಬಾಂಧವರೇ' ಎಂದು ಕೂಗುತ್ತಾರಲ್ಲ, ಏಕೆ?'' ಅಂತ ಓದುಗರೊಬ್ಬರು ಬರೆದಿದ್ದಾರೆ.

ಈ ಬಾಂಧವ್ಯ ಮತ ಕೊಡುವ ತನಕ ಅಂತ!!

★★★

ಈ ಕಾವೇರಿ ಗಲಾಟೆ ಕಮ್ಮಿ ಮಾಡೋದಕ್ಕೆ, ಮಳೆ ಬೀಳದಿದ್ದ ಪ್ರದೇಶಗಳಲ್ಲೆಲ್ಲ ಕ್ರಿಕೆಟ್ ಮ್ಯಾಚುಗಳನ್ನ ಏರ್ಪಡಿಸಬೇಕು!!

★★★

ಭಾರತಕ್ಕೆ ಪೋಪ್ ಭೇಟಿ; ಬುಲೆಟ್ ನಿರೋಧಕ ವಾಹನದ ಬಳಕೆ

- ಸುದ್ದಿ

ಶಾಂತಿದೂತರಿಗೂ ಈ ವಾಹನದ ಅಗತ್ಯವಿರುವ ಕಾಲ ಬಂತೇ ಎಂದು ಅಪರಂಜಿ ದುಃಖಿಸಿದಳಂತೆ!!

★★★

ಸೋನಿಯಾ ಗಾಂಧಿ ಬಳ್ಳಾರಿಯಲ್ಲಿ ವಿಜಯ

- ಚುನಾವಣಾ ಸುದ್ದಿ

ಸೊಸೆಗೊಂದು ಕಾಲ!!

★★★

ಲಾಲೂ ಪ್ರಸಾದ್ ಪರಾಭವ

-ಸುದ್ದಿ

ಬಿಹಾರದ ಜನತೆಯೂ ವಿಕಾಸಗೊಳ್ಳುತ್ತಿದೆ!!

★★★

ಪಕ್ಷದ ಶಿಸ್ತು ಕಾಯ್ದುಕೊಳ್ಳಲು ಲಾಲೂ ಎಚ್ಚರಿಕೆ

- ಸುದ್ದಿ

ಕೋಟೆ ಸೂರೆ ಹೋದಮೇಲೆ...!!


★★★

ವಾಜಪೇಯೀ ಮೂರನೇ ಇನ್ನಿಂಗ್ಸ್ ಆರಂಭ

- ಪತ್ರಿಕೆ

ಕ್ರಿಕೆಟ್‌ನಲ್ಲಿ ಭಾರತಕ್ಕೂ ಇದೇ ಅಗತ್ಯ?!

★★★



ವಂಡರ್ - ಕಣ್ಣು ಮುಚ್ಚಿದಾಗ

- ಕೃಷ್ಣ ಸುಬ್ಬರಾವ್

ನ್ಯೂಯಾರ್ಕ್‌ನಿಂದ ಮುಂಬೈಗೆ ಬರುತ್ತಿದ್ದ ವಿಮಾನದಲ್ಲಿ ನಮ್ಮೆಲ್ಲರ ಮೆಚ್ಚಿನ ವೈ.ಎನ್.ಕೆ. ಹೃದಯಾ'ಘಾ'ತಕ್ಕೆ ಹೀಡಾಗಿ 16-10-99 ರಂದು ಅಸುನೀಗಿದಾಗ ಅವರ ಸ್ವಗೃಹ 'ರಾಧಿಕಾ'ದಲ್ಲಿ ಅಂತಿಮ ನಮನ ಸಲ್ಲಿಸಲು ಕಾಯುತ್ತಿದ್ದ ಆಪ್ತವಲಯದ ವಿಸ್ತಾರ ಅರಿವಾಯಿತು. ಸಾಹಿತಿಗಳು ನಟ-ನಟಿಯರು, ಇತರ ಕಲಾವಿದರು, ರಾಜಕೀಯ ಧುರೀಣರ ದಂಡೇ ಅಲ್ಲಿತ್ತು. ಅವಿವಾಹಿತರಾಗಿಯೇ ಉಳಿದ ವೈ.ಎನ್.ಕೆ. ಕುಟುಂಬ ಎಷ್ಟು ದೊಡ್ಡದು! ಕಲಾವಿದರಲ್ಲಿ ಮುಕ್ಕಾಲು ಭಾಗ ಹೇಳುತ್ತಿದ್ದುದು ಒಂದೇ ಮಾತು. ''ನಾನು ಮುಂದೆ ಬರಲು ವೈ.ಎನ್.ಕೆ. ಕಾರಣ'' ಸತ್ತವರ ಬಗ್ಗೆ ಕೇವಲ ಒಳ್ಳೆ ಮಾತಾಡಲು ಹೇಳಲು ಹಾಗೆ ಹೇಳಿದ್ದಲ್ಲ. ಅದು ನೂರಕ್ಕೆ ನೂರು ಸತ್ಯ. ಪ್ರತಿಭೆಗಳನ್ನು ಗುರುತಿಸಿ ಅವರು ಹೆಚ್ಚು ಓದುವಂತೆ, ಹೆಚ್ಚು ತಿಳಿಯುವಂತೆ ಮಾಡುತ್ತಿದ್ದ ವ್ಯಕ್ತಿ. ಅವರೊಡನೆ ಮಾತು ಎಂದರೆ ಹೆಚ್ಚುಕಮ್ಮಿ ಒನ್‌ವೆ. ಅವರಿಗೆ ಹೇಳುವುದಕ್ಕೆ ಬಹಳಷ್ಟು ಇರುತ್ತಿತ್ತು. ಒಂದೇ ಓಟದಲ್ಲಿ ಹೇಳುತ್ತಿದ್ದರು. 'ಅಪರಂಜಿ' ಬೆಳವಣಿಗೆಯಲ್ಲಿ ಅವರು ಆಸಕ್ತರಾಗಿದ್ದರು. 'ಹಾಸ್ಯ' ಮುಖ್ಯವಾಹಿನಿಯಲ್ಲೇ ಬರಬೇಕು ಅದೇ ಪ್ರತ್ಯೇಕವಾಗಬಾರದು ಎಂದು ಆಗಾಗ್ಗೆ ನಮಗೆ ಹೇಳುತ್ತಿದ್ದರೂ ನಾವು ಪ್ರತಿ ವರ್ಷ ನಡೆಸುವ ಹಾಸ್ಯೋತ್ಸವದ ತಯಾರಿಯಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುತ್ತಿದ್ದರು. ಏನೇನು ಮಾಡುತ್ತಿದ್ದೀರಿ ಎಂದು ವಿಚಾರಿಸುತ್ತಿದ್ದರು. ಹಾಸ್ಯೋತ್ಸವ ಮುಗಿದ ಮೇಲೆ ನಾವು ಸೇರುವ ಸಭೆಯಲ್ಲಿ ಐದು - ಹತ್ತು ನಿಮಿಷ ಬಂದು ತಮ್ಮ ಅಭಿಪ್ರಾಯ ಹೇಳಿ ನಗಿಸಿ ಹೋಗುತ್ತಿದ್ದರು. ಎಲ್ಲೂ ನಿಲ್ಲುತ್ತಿರಲಿಲ್ಲ. ಯಾವಾಗಲೂ ಚಾಲನೆ. ಯಾವ ಸಮಾರಂಭಕ್ಕೂ ಹೋಗಿ ಕುಳಿತುಕೊಳ್ಳುತ್ತಿರಲಿಲ್ಲ. ಕೈಲಾಸಂ ಯಾವುದನ್ನೂ ಬರೆಯಲಿಲ್ಲ ಕೇವಲ ಬರೆಸಿದವರು ಏಕೆಂದರೆ ಅವರ ಚಿಂತನೆಯ ಓಟಕ್ಕೆ ಅವರ ಪೆನ್ನಾಗಲಿ, ಕೈಯಾಗಲಿ ಸ್ಪಂದಿಸುತ್ತಿರಲಿಲ್ಲವಂತೆ. ಹಾಗೆ ವೈ.ಎನ್.ಕೆ. ಚಿಂತನೆಯ ಓಟಕ್ಕೆ ಅವರ ಮಾತು ಮಾಸ್ (Mass) ಗೆ ಅರ್ಥವಾಗುವುದು ಕಷ್ಟವಾಗುತ್ತಿತ್ತು. ಹೀಗಾಗಿ ಅವರು ಸಾರ್ವಜನಿಕ ಸಭೆಗಳಲ್ಲಿ ಒಳ್ಳೆ ಮಾತುಗಾರರಾಗಲಿಲ್ಲ. ಕೇವಲ ಅವರೊಡನೆ ಸಂಭಾಷಣೆ ಲಾಭ ಪಡೆದ ಫಲಾನುಭವಿಗಳಿಗೆ ಮಾತ್ರ ಅವರ ಆಕರ್ಷಕ ಮಾತಿನ ಅರಿವು. ವಂಡರ್ ಕಣ್ಣಿನ ಅನೇಕ ವಿಚಾರಧಾರೆ ಲಭ್ಯವಾಗಿದ್ದೇ ಪುಣ್ಯ. ವೈ.ಎನ್.ಕೆ. ಜ್ಞಾಪಕಶಕ್ತಿ ಅಸಾಧ್ಯ. ಅಪರಂಜಿ ವಿಶೇಷಾಂಕಕ್ಕೆ ರಾಜರತ್ನಂ ಬಗ್ಗೆ ಲೇಖನ ಕೇಳಿದ ಸಂದರ್ಭದಲ್ಲಿ ತಾವು ಇಪ್ಪತ್ತೈದು ವರ್ಷದ ಹಿಂದೆ ಬರೆದ ಲೇಖನವನ್ನು 'ಪ್ರಜಾವಾಣಿ'ಯಿಂದ ಪಡೆಯಬೇಕೆಂದರು. ಜೆರಾಕ್ಸ್ ಪ್ರತಿಯಲ್ಲಿ ಸ್ಪಷ್ಟವಾಗದ ಕೆಲವು ಹಳಗನ್ನಡ ಪದಗಳನ್ನು ಕೇಳಲು ಹೋದಾಗ ಒಂದು ಇಡೀ

ಪ್ರುಟದ ಲೇಖನದವನ್ನು ಹಳಗನ್ನಡದ ಪದ್ಯದ ಸಹಿತ ಬಾಯಲ್ಲೇ ಹೇಳಿದರು. ಕೈಲಾಸಂ ಹೇಳಿದ ಹಾಗೆ ವೈ.ಎನ್.ಕೆ. ಅವರ ಜ್ಞಾಪಕಶಕ್ತಿ ಅಸಾಧಾರಣ. ಯಾವುದಾದರೂ ಕೃತಿ ಸಿಗದಿದ್ದರೆ ಬಾಯಲ್ಲೇ ಹೇಳಿಬಿಡುವಷ್ಟು ಮೆಮೊರಿ.

ಶ್ಲೇಷಾರ್ಥದಲ್ಲಿ ಅಪಾರ ಆಸಕ್ತಿ ಹಾಗೂ ಪದಗಳನ್ನು ಒಡೆದು ಹೇಳಿ ಆನಂದಪಡುವುದರಲ್ಲಿ ನಿಸ್ಸೀಮರು. ಹಾಗೆ ಯೋಚನೆ ಮಾಡುತ್ತಿದ್ದಾಗ ಅವರು ತಮ್ಮ ಸಾವಿನ ಬಗ್ಗೆ ಏನು ಹೇಳುತ್ತಿದ್ದರು ಎಂಬ ಆಲೋಚನೆ ಮಿಂಚಿನಂತೆ ಬಂದು ಹೋಯಿತು. ಅವಕಾಶವಿದ್ದರೆ ಹೀಗೆ ಹೇಳುತ್ತಿದ್ದರೆ ವೈ.ಎನ್.ಕೆ.!

ಪ್ರಶ್ನೆ - ಯಾರ್ಕರ್ (Yorker) ಗೆ ಅನೇಕ ಬ್ಯಾಟ್ಸ್‌ಮ್ಯಾನ್‌ಗೆ ಬಲಿಯಾಗಿದ್ದಾರೆ ಆದರೆ ನೀವು ನ್ಯೂಯಾರ್ಕ್‌ಗೆ....?

ವೈ.ಎನ್.ಕೆ. - ಹೌದಯ್ಯ. ಮುಂಬೈ ಬರೋದಕ್ಕೆ ಮುಂಚೇನೇ ಮಾಡಲಿಲ್ವಾ ಬೈ ಬೈ! ಎಪ್ಪತ್ತು ಮೂರು ರನ್ ಮಾಡಿ ಎಪ್ಪತ್ತನಾಲ್ಕನೆ ರನ್‌ಗೆ ಓಡುವಾಗ ರನ್‌ವೆ ಟಚ್ ಮಾಡೊಕ್ಕೆ ಮುಂಚಿನೆ ರನ್ ಔಟ್!

ಪ್ರಶ್ನೆ - ಸಂಪ್ರದಾಯಗಳಲ್ಲಿ ಮೊದಲಿನಿಂದಲೂ ನಂಬಿಕೊಂಡವರು ನೀವು ಆನ್ ಬೋರ್ಡ್ (On-Board) ನಲ್ಲಿ ಹಾರೋ ಪ್ಲೇನ್ - ಒಳಗಿಂದ ಹಾರಿಹೋದಿರಿ, ಆದರೂ ಪೆಟ್ಟಿಗೆಯೊಳಗೆ ಮಲಗಿ ಬಂದಿರಲ್ಲಾ 'ಕಿರಿಸ್ತಾನ' ದವರಂತೆ.

ವೈ.ಎನ್.ಕೆ. - ಜಗತ್‌ನಲ್ಲಿ ಜಾಗ ಇಲ್ಲ ಅನ್ನಿಸಿತು ಇಕ್ಕಟ್ಟಿ (ಈ-ಕಟ್ಟಿ)ನಲ್ಲಿ Drive-in ಸರ್ವೀಸ್ ತರಹ coffee-in (coffin) ಸರ್ವೀಸ್ ಇದ್ದಿದ್ದರೆ ಕಡೆ ಗುಟುಕು ಸವಿಯಬಹುದಿತ್ತು.

ಪ್ರಶ್ನೆ - ನಿಮ್ಮ ದೇಹನಾ ಪೋಸ್ಟ್‌ಮಾಟಮ್ ಮಾಡಿ ಎಂಬಾಂಬ್ ಮಾಡಿದರಲ್ಲಾ!

ವೈ.ಎನ್.ಕೆ. - ನನ್ನಲ್ಲಿ ಯಾವ ಹುಸಿಬಾಂಬು ಇಲ್ಲ ಅಂತ ಖಾತರಿಮಾಡಿಕೊಂಡು ಎಂಬಾಂಬ್ ಮಾಡಿದ್ರು.

ಪ್ರಶ್ನೆ - 'ಘಾ' ಅವರಿಗೆ ಇಷ್ಟೊಂದು ಅಘಾತ ಮಾಡಬಹುದೇ?

ವೈ.ಎನ್.ಕೆ. - ಶವದ ಪೆಟ್ಟಿಗೆಯ ಕೊನೆ ಮೊಳೆಯನ್ನು ಬಾಟಲ್ ಓಪನರ್‌ನಿಂದ ತಾನೇ ತೆಗೆದಿದ್ದು! ಅಲ್ಲೆ ಇತ್ತು ಅಡಿಗೆ ಮನೆಯಲ್ಲಿ. ಬಾಕ್ಸ್ ಓಪನರ್ ಮನೆಯಲ್ಲಿ ಇಡಬೇಕಾಗಿತ್ತಲ್ಲವೆ?

ಚಿಕ್ಕ ವಯಸ್ಸಿನಿಂದಲೇ ಜೊತೆಯಲ್ಲೇ ಬೆಳೆದ ಶ್ರೀಪತಿ ಬಿಕ್ಕುತ್ತಿದ್ದ ಸದ್ದಿಗೆ ನಾನು ಬೆಚ್ಚುಬಿದ್ದು ಕಲ್ಪನಾಲೋಕದಿಂದ ವಾಸ್ತವಕ್ಕೆ ಬಂದೆ ಗಣ್ಯರು ಬಂದಾಗಲೆಲ್ಲಾ ಮಿಂಚುತ್ತಿದ್ದ ವಿಡಿಯೋ ಬೆಳಕಿಗೆ ವಂಡರ್‌ಕಣ್ಣು ಮುಚ್ಚಿತ್ತು.

'ರಾಧಿಕಾ' ದಲ್ಲಿ ಬೃಹತ್ ಆಗಿ ಬೆಳೆದು ಮನೆಯಿಂದ ಹೊರಗೆ ಚಾಚಿರುವ Friendship Tree ಅವರ ವಲಯ ವಿಸ್ತಾರದ ಪರಿಚಯ ಮಾಡಿಸುತ್ತಾ ನಿಂತಿತ್ತು.

ಚಲುವಯ್ಯನೋರ ಚಟ್ಣೀಪುಡಿ ಚಳುವಳಿ

– ನಾಗಶ್ರೀ ಸೂರಿ

"ನೀವು ಹೇಳೋ ಥರಾ ಆ ವೀರಪ್ಪನ ಪಾಳ್ಯದ ಹತ್ರ ಕುಡಿಯೋ ನೀರಿಗೇ ಅಂತ ಕಟ್ತಿರೋ ಆ dam ಕೆಲಸಾನ ಕೂಡ್ಲೆ ನಿಲ್ಲಿಸಿ, ಇಲ್ಲದಿದ್ರೆ ಅದ್ರಿಂದ ಅಲ್ಲಿನ ಜನಗಳ lifestyle ಉ, ecological balance ಅನ್ನೋವು ಎಲ್ಲಾ upset ಆಗೋಗತ್ತೆ ಅಂತ ಚಳುವಳೀನ ಶುರೂ ಮಾಡೋದಕ್ಕೆ ಒಳ್ಳೆ scope ಇದೆ. ಆದ್ರೆ, ಚಳುವಳೀ ಅಂತ ಅಂದುಕೊಂಡು ಕುಡಿಯೋಕ್ ನೀರಿಗೂ ಗತಿಯಿಲ್ಲದಿರೋ ಆ ಊರಲ್ಲಿ ತಿಂಗಳಾನುಗಟ್ಲೆ camp ಮಾಡಿಕೊಂಡಿರೋಕ್ಕೆ ಯಾವನ್ ಕೈನಲ್ಲಿ ಸಾಧ್ಯಾ ಹೇಳಿ... ಜತೆಗೆ ನಮ್ಮ ಚಳುವಳಿಯಿಂದಾಗಿ ಆ dam ಕೆಲಸ ನಿಂತು ಹೋಗಬಹುದೂ ಅನ್ನೋ ಭಯಕ್ಕೆ ಆ ಪ್ರಾಜೆಕ್ಟಿನ ಎಕ್ಸಿಕ್ಯೂಟಿವ್ ಇಂಜನೀಯರ್ ಈಶ್ವರಪ್ಪ ರೌಡೀಗಳನ್ನ ಬಿಟ್ಟು ಹೊಡೆಸಿದರೂ ಹೊಡೆಸಬಹುದು, ನಮ್ಮನ್ನ... ಅವನ percentage ಗೆ ಧೋಕಾ ಆಗುತ್ತಲ್ಲ ಕೆಲಸ ನಿಂತು ಹೋದ್ರೆ..."

"ಅಷ್ಟು ಶ್ರಮ ನಿಮ್ಮ ಕೈನಲ್ಲಿ ಆಗೊಲ್ಲ ಅನ್ನೋದಾದ್ರೆ ಸಾರ್, ಚಲುವಯ್ಯನೋರೇ... ಹೊತ್‌ಹೊತ್ಗೆ ಊಟ, ಮಧ್ಯಾನ ನಿದ್ದೆ, ಸಂಜೆ ಕ್ಲಬ್ಬು ಅಂತ then keep enjoying your retirement... ಆದ್ರೆ ಸರ್ವಿಸ್ನಲ್ಲಿ ಇದ್ದಾಗ ಇರತಿದ್ದ media publicity, foreign jaunts, control of public funds ಅವಕ್ಕೆಲ್ಲಾ ಈಗ ರಿಟೈರ್ ಆದ ಮೇಲೂ ಅವಕಾಶ ಬೇಕೂ, ಅದಕ್ಕೇನಾದ್ರೂ ಸುಲಭವಾದ ಮಾರ್ಗ ತೋರಿಸ್ಕೊಡತೀರೇನೂ ಅಂತ ಕೇಳತಿದ್ರಿ, ಅದಕ್ಕೆ ನಾನು ಹೇಳಿದೆ, ಅಷ್ಟೇ... ಅದ್ರ ಮೇಲೆ ನಿಮ್ಮ ಇಷ್ಟ... ನನಗೆ ತೋಚಿದ್ದು ನಾನು ಹೇಳಿದ್ದೇನೆ."

"ಹಾಗಲ್ಲ, ಸೋಮಯ್ಯನೋರೇ... ಅಷ್ಟು ದೂರದಲ್ಲಿರೋ ಆ ಹಾಳು ಕೊಂಪೇಗೆ ಹೋಗಿ ದಾಹಾ ಅಂದಾಗ ನೀರಿಲ್ಲ, ಹಸಿವೂ ಅಂದಾಗ ಊಟ ಸಿಗೊಲ್ಲ ಅಂತ ಒದ್ದಾಡೋದನ್ನ ಬಿಟ್ಟು, ಈ ಊರಲ್ಲೇ ಇದ್‌ಕೊಂಡು ಯಾವುದಾದ್ರೂ public cause ಅನ್ನೋದನ್ನ ಕೈಗೆ ಎತ್ಕೊಂಡ್ರೆ ಆಗೊಲ್ಲವ?..."

"ಅಂಥಾದ್ದು ಯಾವುದು ಉಳಿದಿದೆ ಹೇಳಿ, ಈ ಊರಲ್ಲಿ?... AIDS awareness, child labour, drug abuse, animal rights ಅಂತ ಯಾವ

areaನೇ ನೋಡಿ ಈಗ- ''ಚಿತ್ರ ಮಂದಿರ ಭರ್ತಿಯಾಗಿದೆ'' ಅನ್ನೋ ಥರಾ HOUSE FULL Situation ಆಗಿಬಿಟ್ಟು, no scope for new players..."

''ಅದೂ ನಿಜಾನೇ ಅನ್ನಿ. ಆದ್ರೆ ಇದೇ ಊರಲ್ಲಿ ಅಷ್ಟೊಂದು ಫ್ಯಾಕ್ಟರಿಗಳೂ ಅಂತ ಇವೆಯಲ್ಲಾ ಅಲ್ಲೇನಾದ್ರೂ pollution hazards ಉ effluent control ಅಂತ ಮಾಡೋದಕ್ಕೆ ಆಗೋಲ್ಲವಾ?''

''ಸರೀ ಹೋಯ್ತು... ಅದಕ್ಕೆಲ್ಲಾ ಯಾವತ್ತೋ ಆಗೋಯ್ತು ಪೀರಿಯಡ್ಡು... effluent control ಅಂತ ಹೆಸರು ಹೇಳಿಕೊಂಡು ಸಾಕಷ್ಟು ಜನ ಈಗಾಗಲೇ affluent ಆಗಿಹೋಗಿದ್ದಾರೆ. ಅವರ ಹೆದರಿಕೇಗೆ ಫ್ಯಾಕ್ಟರೀ ನಡಸತಾ ಇದ್ದೋರು ಅರ್ಧ ಜನ ಬೇಗ ಜಡಿದುಕೊಂಡು ಊರು ಬಿಟ್ಟು ಹೋಗಿದ್ದಾರೆ... ಇನ್ನ ಹೊಸಬ್ರುಗಳು ಪರಿಸ್ಥಿತಿ ಮುಂದೆ ಹೇಗಿರತ್ತೊ ಅನ್ನೋದು ಗೊತ್ತಾಗದೇ ಬರೋಕ್ಕೆ ಹಿಂದೇಟು ಹಾಕತಾ ಇದ್ದಾರೆ... ಹಾಂ, ಮರೆತೇ ಬಿಟ್ಟಿದ್ದೆ, ನೋಡಿ... ಈ ಊರಿನ outskirts ನಲ್ಲಿ ಜರ್ಮನ್ know-how ತಗೊಂಡು ಒಂದು hundred percent EOU ಬರ್‍ತಾ ಇದೆ. ಅಲ್ಲಿ ಇನ್ನೇನು ಮುಂದಿನ ತಿಂಗಳು production ಆರಂಭ ಆಗೋ ಥರಾ ಇದೆ... ಅಲ್ಲಿ ಇದೆ ನೋಡಿ ಸಾರ್, ನಿಮ್ಮ golden goose ಉ...''

''ಓಹೋ, ನೀವು ಹೇಳ್ತಾ ಇರೋದು ನಮ್ಮ ರಾಮೇಗೌಡರು, ಅವರ ತಮ್ಮ ಚಂದ್ರೇಗೌಡರು promote ಮಾಡ್ತಿರೋ Gowders' Powders ಅನ್ನೋ ಫ್ಯಾಕ್ಟರೀ ವಿಷಯಾ ತಾನೇ?... ಅದು ಚಟ್ನೀಪುಡಿ, ಗೊಜ್ಜಿನ ಪುಡಿ ಅಂಥಾವನ್ನ ಮಾಡೋ ಫ್ಯಾಕ್ಟರಿ... ಅದರಲ್ಲೇನಿರತ್ತೆ ಅಂಥಾ pollution hazards ಉ?...''

''ಹಾಗೆ ಅಂದುಕೊಂಡೇನೇ ಜನಗಳು ಅದನ್ನ ಅದರ ಪಾಡಿಗೇ ಬಿಟ್ಟಿರೋದು... ಆದ್ರೆ seek and ye shall find ಅನ್ನೋ ಥರಾ ಹುಡುಕಿದ್ರೆ ಅಲ್ಲೂ ಕೂಡಾ ಸಿಗತ್ತೆ ನಿಮಗೆ ಸಾಕಷ್ಟು grist... ನೀವು ನೋಡಿರಬಹುದು, ಆ ಫ್ಯಾಕ್ಟರೀನಲ್ಲಿ ಮೂರು ದೊಡ್ಡ ದೊಡ್ಡ chimney ಇವೆ...''

''ಹೌದೌದು, ಒಂದೊಂದೂ ನೂರುನೂರು ಅಡೀ ಇರಬಹುದೂ ಅಂತೀನಿ.''

''ಅಷ್ಟು ದೊಡ್ಡ chimney ಇದ್ದ ಮೇಲೆ pollution ಇದ್ದೇ ಇರತ್ತೆ, ಅದರಿಂದ ಜನಗಳಿಗೆ ಅಪಾಯ ತಪ್ಪಿದ್ದಲ್ಲ ಅಂತ ನೀವು ಪಟ್ಟು ಹಿಡೀಬೇಕು.''

''ಚಟ್ನೀಪುಡಿ ಫ್ಯಾಕ್ಟರೀ chimney ನಲ್ಲಿ ಅದೆಂಥಾ pollutant ಬರುತ್ತೆ ಅಂತ ಯಾರದ್ರೂ ಕೇಳಿದ್ರೆ ಏನು ಉತ್ತರಾ ಕೊಡೋದು?''

''ಬಹಳಾನೇ ಸುಲಭ... ಜರ್ಮನೀನಲ್ಲಿ ಇದರ ಬಗ್ಗೆ ರಿಸರ್ಚ್ ಮಾಡಿದ್ದಾರೆ, ಚಟ್ಣೀ ಪುಡೀನೆ ಆಗಲಿ, ಗೊಜ್ಜಿನ ಪುಡೀನೇ ಆಗಲಿ large-scale ನಲ್ಲಿ ಫ್ಯಾಕ್ಟರೀಗಳಲ್ಲಿ ಅದನ್ನ ಮಾಡೋವಾಗ ಒಂದು ಥರಾ toxic gas ಬರುತ್ತಂತೆ - ಅದು ಹಿಟ್ಲರ್ ಯಹೂದ್ಯರನ್ನ ಕೊಲ್ಲೋಕ್ಕೆ ಉಪಯೋಗಿಸ್ತಾ ಇದ್ನಂತಲ್ಲ ಆ ವಿಷವಾಯು ಥರಾನೇ ಇರತ್ತಂತೆ... ಅದಕ್ಕೇನೇ ಈ ಫ್ಯಾಕ್ಟರೀನ ಅಲ್ಲೇ ಜರ್ಮನೀನಲ್ಲಿ ಹಾಕದೇ ಇಲ್ಲಿ third-world country ನಲ್ಲಿ ಹಾಕ್ತಾ ಇರೋದಂತೆ ಅಂತ ಒಂದು ಭೋಡ್ ಬಿಟ್ರೆ ಆಯಿತು... ನೀವು ಹೇಳೋದು ಸುಳ್ಳೋ ನಿಜವೋ ಅಂತ ಯಾರೂ deep ಆಗಿ ನೋಡೋಕ್ಕೆ ಹೋಗಲ್ಲ...''

''ಸರಿ, ಆ gas ಗೆ ಏನೂ ಅಂತ ನಾಮಕರಣ ಮಾಡೋಣ?''

''ಅದಕ್ಕೆ ಇನ್ನೊಂದು ಉಡಾಫೆ ಬಿಟ್ರೆ ಆಯಿತು.... for example - hydrogen di-chloro tri-sulphide ಅಂತಾನೇ ಇಟ್ಟರೆ ಆಯಿತು, ಅಷ್ಟೇ.''

"let me think... hydrogen di-chloro tri-sulphide... ಹ್ಹ, ಹ್ಹ... ತುಂಬಾನೇ impressive ಆಗಿದೆ... ಜನ ಬಹುಬೇಗ ಅದನ್ನ ನಂಬಿ ಬಿಡತಾರೆ... ನಿಜವಾಗೂ ನಿಮ್ಮ ತಲೇ ಇದೆ ನೋಡಿ, ಅದರ ಒಳಗೆ ಬ್ರಹ್ಮಾನೇ ಖುದ್ದಾಗಿ ನಿಂತ್ಕೊಂಡು ಮೆದುಳನ್ನ ತುಂಬಿರಬೇಕೂ ಅಂತೀನಿ... ಸೋಮಯ್ಯನೋರೇ...''

''ಅಟ್ಟಕ್ಕೇರಿಸ್ತಾ ಇದ್ದೀರಿ ಸಾರ್, ಅಟ್ಟಕ್ಕೆ... ಆಯಿತು, ಶುಭಸ್ಯ ಶೀಘ್ರಂ ಅಂತ ಮುಂದಿನ ವಾರಾನೇ ಆಷಾಢ ಕಳಕೊಂಡು ಪ್ರಾರಂಭ ಮಾಡಿ ಬಿಡೋಣ... ನಿಧಾನ ಅಂತ ಆದ್ರೆ ಬೇರೆ ಇನ್ಯಾರಾದ್ರು ಅಷ್ಟರಲ್ಲೆ ಕೈಹಾಕಿಬಿಡಬಾರದಲ್ಲ, ನಮ್ಮ ಮೀನಿನ ಬುಟ್ಟೀಗೆ...''

''ಅಷ್ಟು ಬೇಗಾ ಅಂದ್ರೆ ಹ್ಯಾಗೆ ಸೋಮಯ್ಯ?... ಜನಗಳನ್ನ ಜಮಾಯಿಸಬೇಕೂ, ಮತ್ತೆ ಪೇಪರ್ ಅವರನ್ನ ಕರೆದು ಒಂದು ಹೇಳಿಕೇ ಕೊಡಬೇಕು... ಎಷ್ಟೊಂದು ಸಿದ್ಧತೆ ಆಗಬೇಕೂ, ಏನು ಕಥೇ...''

''ಆ ವಿಷಯಾನ ನನಗೆ ಬಿಡಿ... ನಿಮ್ಮ ರೆಕ್ಕೆ ಪುಕ್ಕ ಬೆಳೆಯೋಕ್ ಮುಂಚೆ ಪೇಪರ್‌ನೋರನ್ನ ಕರೆಸಿ ಹೇಳಿಕೆ ಕೊಡೋಕ್ಕೆ ಅಂತ ಹೋದ್ರೆ ತುಂಬಾ ಖರ್ಚಾಗತ್ತೆ... ಅದು ಈಗಲೇ ಏನೂ ಅಗತ್ಯ ಇಲ್ಲ, ಅಷ್ಟು ಬೇಕೂ ಅಂದ್ರೆ ಆವಾಗಾವಾಗ ಒಂದಿಷ್ಟು hand bills ನ ಮಾಡಿಸಿ ಹಂಚಿದ್ರೆ ಆಗತ್ತೆ... ಅದೂ ಈಗಲೆ ಏನೂ ಬೇಡ. ಮತ್ತೆ ಜನಗಳು - ಆ ಫ್ಯಾಕ್ಟರೀ ಹತ್ರಾನೆ ಬೇಕಾದಷ್ಟು ಜನ ರಿಟೈರ್ ಆದ ಜನಗಳಿದ್ದಾರಲ್ಲ... ಅವ್ರುಗಳೇ ಸಿಗತಾರೆ... ಕಾಸು ಕೊಡದೇ ಇದ್ರೂನೂ ಪರವಾಗಿಲ್ಲ, ಅವರೇನೇ ಮನೇನಲ್ಲಿ ಬೆಳಗಿನ ಟಿಫಿನ್

ಮುಗಿಸ್ಕೊಂಡು ಬಂದು ಊಟದ ಟೈಂ ವರೆಗೂ time-pass ಅಂತ ಬರತಾರೆ... ಅವಕ್ಕೆ ಅಷ್ಟು ಸಾಕು - ಮುಂದಿನದ್ದು ಆಮೇಲೆ ನೋಡಿಕೊಂಡರೆ ಆಯಿತು.''

''ಎಲ್ಲಾ ಸರೀನೇ.. ಆದ್ರೆ ನಮ್ಮ ಚಳುವಳೀಗೆ ಆ ಫ್ಯಾಕ್ಟರೀ ಕಡೆಯಿಂದ ಯಾವ ರೀತಿ reaction ಬರಬಹುದೂ ಅಂತೀರ... I mean, what are our chances of success...?"

"Cake-walk, Sir, cake walk... ಆ ರಾಮೇಗೌಡರು, ಚಂದ್ರೇಗೌಡರು ಈ agitations ಊ adverse media publicity ಅಂದ್ರೆ ಸ್ವಲ್ಪ ಹೆದರೋ ಆಸಾಮಿಗಳು... ಮತ್ತೆ ಆ ಜನರಲ್ ಮ್ಯಾನೇಜರ್ರು ಹೇಮಚಂದ್ರ... ಅವನು ರಾಮೇಗೌಡರ ಮಗ... ಇನ್ನೂ ಪಡ್ಡೆ ಹುಡುಗ, ಅಪ್ಪನ ಥರಾನೇ... ಇನ್ನು ಅಲ್ಲಿಗೆ ಬಂದಿರೋ ಜರ್ಮನ್ ಫಿಟ್ಟರುಗಳು, ಅವರು ಇವಕ್ಕೆಲ್ಲ ಮಧ್ಯೆ ಬರೋಲ್ಲ... ಆ admin manager ಗಂಗಾಧರನ್... ಅವ್ನು ಒಬ್ಬ ಇಲ್ಲಿ ಒಂದು ಥರದಲ್ಲಿ dark horse... ಹ್ಯಾಗೇ ಅನ್ನೋದು ನನಗೆ ಸರಿಯಾಗಿ ಗೊತ್ತಿಲ್ಲ... ನಮ್ಮೂರಿನವನಲ್ಲ... ಎಲ್ಲೋ ಪಾಲಘಾಟ್ ಕಡೆಯವನಂತೆ... I don't think we need to worry about him'' ಹೀಗೆ ಶುರೂ ಆಯಿತು ನೋಡಿ, ನಮ್ಮ ಚಲುವಯ್ಯನವರ ಚಳುವಳಿ.

ಒಂದು ವಾರ ಆಯಿತು - ಫ್ಯಾಕ್ಟರೀನವರ ಕಡೇನಿಂದ ಏನೂ reaction ಇಲ್ಲ - ಎರಡು ವಾರ ಮುಗೀತು, ಉಹುಂ, ಡಿಟ್ಟೋ...

''ಏನು, ಸೋಮಯ್ಯ, ಯಾಕೋ ಎಮ್ಮೇ ಮೇಲೆ ಮಳೇ ಸುರಿದ ಹಾಗೆ ಆಗ್ತಾ ಇದ್ಯಲ್ಲ, ಈ ಫ್ಯಾಕ್ಟರೀನವರ ಕಥೆ? ಹೀಗೆ ಎಷ್ಟು ದಿನಾ ಅಂತ ಸಾಯಬೇಕಾಗತ್ತೆ ಅಂತೀರ?...''

''ಹೌದಲ್ಲಾ, ಯಾಕೋ ಕೊಂಚ ಎಡವಟ್ಟಾಗೋ ಥರಾ ಇದ್ಯಲ್ಲ... ಒಂದು ಕೆಲಸಾ ಮಾಡೋಣ ಸಾರ್... ಒಂದಿಷ್ಟು handbills ಹೊಡಸಿ ಹಂಚಿ ನೋಡೋಣ... ದುಡ್ಡಿನ್ ಮುಖ ನೋಡತಾ ಇದ್ರೆ ಆಗೊಲ್ಲ...'' ಮಾರನೇ ದಿನಾನೇ ಬಂದವು ಚಲುವಯ್ಯನೋರ hand bill ಗಳು...

''ಭೂಪಾಲಿನ ಹತ್ಯಾಕಾಂಡವನ್ನೂ ಮೀರಿಸುವಂತ ಸನ್ನಿವೇಶವನ್ನು ವಿರೋಧಿಸಿ ನಾವು ಮಾಡುತ್ತಿರುವ ಚಳುವಳಿಯನ್ನು ಉಪೇಕ್ಷೆ ಮಾಡುತ್ತಿರುವ ಹಿಟ್ಲರನ ವಂಶಸ್ಥರು ಒಂದು ವಾರದ ಒಳಗಾಗಿ ನಮ್ಮ ಚಳುವಳಿಗೆ ತಮ್ಮ ಪ್ರತಿಕ್ರಿಯೆ ಏನು ಎಂಬುದನ್ನು ಸ್ಪಷ್ಟಪಡಿಸದೇ ಹೋದರೆ...''

ಮುಂದಿನ ವಾರ ಬಂತು ಪ್ರತಿಕ್ರಿಯೆ... ದೊಡ್ಡ ದೊಡ್ಡ ಪೇಪರುಗಳಲ್ಲಿ ಜಾಹೀರಾತಿನ ರೂಪದಲ್ಲಿ...

"Saliva ಅಂದರೆ ಜೊಲ್ಲು... ಬಾಯಲ್ಲಿ ನೀರು... ಅದೇನೇ ನಮ್ಮ brand name ಕೂಡಾ

ಸಲೈವ ಚಟ್ನೀಪುಡಿ ಇಷ್ಟರಲ್ಲೇ ನಿಮ್ಮ ಕೈ... ಕ್ಷಮಿಸಿ... ನಿಮ್ಮ ಬಾಯಿ ಸೇರಲಿದೆ

ಅದರ ರುಚಿ ಮರೆಯುವ ಹೊತ್ತಿಗೆ ಅದರ siblings...

ಸಲೈವ ಗೊಜ್ಜಿನ ಪುಡಿ, ವಾಂಗೀಭಾತ್ ಪುಡಿ...

ನಿಮ್ಮನ್ನು ಏನೆಲ್ಲ ಮಾಡಿ ಹಾಕುತ್ತವೋ!...

ಬಾಯಿ ಚಪಲಾನ ಜಾಸ್ತಿ ಮಾಡಿದ್ರೀ ಅಂತ ಮಾತ್ರ ನಮ್ಮನ್ನ ಬಯ್ಯಬೇಡಿ, ಆ ಮೇಲೆ...''

''ಯಾಕೋ ಕೈ ಮೀರಿ ಹೋಗತಾ ಇದೆ, ವ್ಯಾಪಾರ, ಸೋಮಯ್ಯಾ... ಈಗ ಏನೂ ಮಾಡೂ ಅಂತೀರ?...''

''ಪರಿಸ್ಥಿತೀನ ತಹಬಂದೀಗೆ ತರೋಕ್ಕೆ ಮತ್ತೆ ಇನ್ನೊಂದು handbill ಅನ್ನ ಛಾಪಾ ಹಾಕಿಸಿದ್ರೆ, ಆಯಿತು, ಹಿಂದೆ ಮಾಡಿಸಿತ್ತಲ್ಲ ಅದೇ ಥರಾ...''

ಅದಕ್ಕೆ ಉತ್ತರಾನೋ ಏನೋ ಅನ್ನೋ ಥರಾ ಬಂತು, ಹತ್ತು ದಿನ ಆದಮೇಲೆ ಪೇಪರ್‌ನಲ್ಲಿ ಇನ್ನೊಂದು ಜಾಹೀರಾತು:

''ನಮ್ಮದು ರಫ್ತುಪ್ರಧಾನ ಉದ್ಯಮ ಆದರೂ ನಮ್ಮ ಮೊದಲನೆಯ ಉತ್ಪಾದನೆಯ ಲಾಭ ನಮ್ಮ ಜನಗಳಿಗೇ ಇರಲಿ ಅನ್ನೋ ಉದ್ದೇಶದಿಂದ ಸಲೈವ ಚಟ್ನೀಪುಡಿಯನ್ನು ತುಂಬಿಸಿಕೊಂಡ ಹನ್ನೆರಡು ಲಾರಿಗಳು ರಾಜ್ಯದ ಪ್ರಮುಖ ನಗರಗಳಿಗೆ ಈ ಶನಿವಾರ ಹನ್ನೆರಡು ಗಂಟೆಗೆ ಹೊರಡತಾ ಇವೆ... ಮೊಸರನ್ನದ ಜತೆಗೆ ಚಟ್ನೀಪುಡಿ, ಚಿರೋಟಿ ಜತೆಗೆ ಚಟ್ನೀಪುಡಿ, ಅದೆಲ್ಲ ಆದಮೇಲೆ ಉಂಡಬಾಯಿಗೆ ಒಗ್ಗರಣೆ ಅಂತ just ಚಟ್ನೀಪುಡಿ... spoil your taste-buds rotten..."

''ಏನು ಮಾಡೋಣಾ ಅಂತೀರ ಸೋಮಯ್ಯಾ?.. ಯಾಕೋ ನಮ್ಮ ಚಳುವಳಿ ಏವಾರ್ ಚೇಸಿಂದಿ ಕೋತಿಪಿಲ್ಲಾಯ ಅನ್ನೋ ಹಾಗಾಗ್ತಾ ಇದ್ಯಲ್ಲ... ಶನಿವಾರ ಅಂದ್ರೆ, ನಾಡಿದ್ದೇ ಆಯ್ತು. ಇನ್ನ ಲಾರಿಗಳಲ್ಲಿ ಮಾಲು ಹೊರಗೆ ಬರೋಕ್ಕೆ ಶುರೂ ಆಯ್ತು ಅಂದ್ರೆ, ಮುಗೀತು ನಮ್ಮ ಕತೆ... ಏನು ಮಾಡೋದು ಈಗ? ಈ ಊರಲ್ಲಿ ಹಾಳಾದೋವ್ರು, ಒಬ್ರೂ ಕೂಡಾ ನಮ್ಮನ್ನ ನೋಟೀಸೇ ಮಾಡಿಲ್ಲವಲ್ಲ ಇಷ್ಟು ಮಾಡಿದ್ರೂ ಕೂಡ!...''

''ಅವ್ರನ್ನ ಇವ್ರನ್ನ ನಂಬಿಕೊಂಡು ಕೂತ್ರೆ ಮೂರುಕಾಸಿನ ಲಾಭ ಇಲ್ಲ ಈಗ - ಈಗ ನಮಗಿರೋ ಒಂದೇ ದಾರಿ ಅಂದ್ರೆ ನೇರ ಕಾರ್ಯಕ್ರಮ - direct action..."

''ಅಂದ್ರೆ?...''

''ಇಲ್ಲಿ ಬೇಡ... ಎಲ್ಲಾರನ್ನು ಕರಕೊಂಡು ನಿಮ್ಮ ಮನೇಗೆ ಹೋಗೋಣ. ಅಲ್ಲಿ ಹೇಳ್ತೀನಿ ಏನು ಮಾಡೋದೂ ಅನ್ನೋದನ್ನ''

ಚಲುವಯ್ಯನವರ ಮನೇನಲ್ಲಿ ಸೋಮಯ್ಯ plan of action explain ಮಾಡಿದ:

''ಚಟ್ನೀಪುಡಿ ತುಂಬ್ಕೊಂಡು ಲಾರಿಗಳು ಗೇಟಿಂದ ಆಚೆಗೆ ಬರದ ಹಾಗೆ ನಾವು ಅದರ ದಾರೀಗೆ ಅಡ್ಡವಾಗಿ ಮಲಕ್ಕೋಬೇಕು. delivery schedule upset ಆಗತ್ತೆ ಅಂದ್ರೆ ಆವಾಗ ಬರತಾರೆ ಸಂಧಾನಕ್ಕೆ... ಹಾಗೆ ಮಾಡಲಿಲ್ಲಾ ಅಂದ್ರೆ ನಾವು ಇಷ್ಟು ದಿನಾ ಮಾಡಿದ್ದು ನೀರಲ್ಲಿ ಹೋಮ ಮಾಡಿದ ಹಾಗೆ ಆಗತ್ತೆ. ಈವತ್ತು ಚಟ್ನೀಪುಡಿ, ನಾಳೆ ಗೊಜ್ಜಿನ ಪುಡಿ ಅಂತ ಪೇಟೆಗೆ ಮಾಲು ಬಂತೋ... ಹುಂ, ಮುಂದೇನು ಅನ್ನೋದು ಹೇಳೋ ಅಗತ್ಯ ಇಲ್ಲ.''

''ಸೋಮಯ್ಯನವರು ಹೇಳೋದು ನಿಜ... ಆದ್ರೆ, Gowders' Powders ಬಾಗಿಲಲ್ಲಿ ಲಾರಿಗಳು ಹೊರಗೆ ಬರದ ಹಾಗೆ ಅಡ್ಡ ನಾವು ಐವತ್ತು ಜನಾನೂ ಒಟ್ಟಿಗೇ ಒಂದೇ ಸಲ ಮಲಕ್ಕೊಂಡ್ರೆ ಫ್ಯಾಕ್ಟರೀ ಬಾಗಿಲನ್ನ ದಾಟಿಕೊಂಡು ಆಚೆ ಪಬ್ಲಿಕ್ ರಸ್ತೆಗೂ ಅಡ್ಡ ಹಾಕಿದ ಹಾಗೆ ಆಗಬಹುದು... ಆದ್ರೆ ನಾನು ಏನು ಹೇಳತೀನೀ ಅಂದ್ರೆ batch by batch... alphabetical order ನಲ್ಲಿ ಅನಂತಾಚಾರ್ರು, ಆನಂದರಾಮ ಶೆಟ್ಟರು, ಈಶ್ವರಪ್ಪನವರು... ಅಂತ ಒಂದು ಹತ್ತು ಜನ ಈ ಶನಿವಾರ ಶುರೂ ಮಾಡಲಿ, ಒಪ್ಪಿಗೆನಾ?...''

''ಯಾಕೇ?... ಲಾರೀ ಕೆಳಗೆ ಸಿಕ್ಕೊಂಡು ನಾವು ಮನೇಯವರನ್ನ care of foot-path ಮಾಡಿ ಹೋಗಲೀ ಅಂತಲೇನೋ, ನಿಮ್ಮ ಆಸೆ, ಚಲುವಯ್ಯನೋರೇ...?''

... ಆನಂದರಾಮ ಶೆಟ್ಟರದ್ದು ಆಕ್ಷೇಪಣೆ.

''ಎಲ್ಲಿ ಬಂತೂ, ಶೆಟ್ಟರೇ?... ನೀವು ಅಷ್ಟೊಂದು ಜನ ಅಡ್ಡ ಮಲಗಿದ್ರೂನೂ ಬ್ರೇಕ್ ಹಾಕದೀರ ಹಾಗೇ ಓಡಿಸ್ಕೊಂಡು ಹೋಗತಾನಾ ಲಾರೀನ, ಯಾವನಾದ್ರೂನೂವೇ?''

''ಚಲುವಯ್ಯನೋರೇ, ನಾಡಿದ್ದು ಲೋಡ್ ತಗೊಂಡು ಹೋಗೋಕ್ಕೆ ಬರೋದು ಆ ಹುಸೇನಿಯಾ ಲಾರೀ ಸರ್ವಿಸ್ನೋರ ಗಾಡಿಗಳು...

ಚನ್ನಪಟ್ಟಣದಲ್ಲಿ ಬ್ರೇಕ್ ಒತ್ತಿದ್ರೆ ಮದ್ದೂರಲ್ಲೇ ನಿಲ್ಲೋದು... ಅವಕ್ಕೆ ಅಡ್ಡ ಮಲಕ್ಕೊಳ್ಳೀ ಅಂತೀರಲ್ಲ, ಒಳ್ಳೇ ಚೆನ್ನಾಗಿದೆ... ಆಯಿತು, ಅಂಥೋರು ನೀವೇ ಯಾಕೆ ಇರಬಾರದು ಈ ಶನಿವಾರದ ಬ್ಯಾಚಲ್ಲಿ?..."

... ಈಶ್ವರಪ್ಪನವರ ಸವಾಲು. ಅವರು RTO ಇಂದ ಮೊನ್ನೇ ತಾನೇ ರಿಟೈರ್ ಆದೋರು.

"ಈಶ್ವರಪ್ನೋರು ಹೇಳೋದೂ ಸರೀನೆ... ಈ ಚಳುವಳೀನಿಂದ maximum benefits ಅನ್ನೋದೆಲ್ಲಾ ಏನಿದ್ರೂ, ಕೊನೆಗೆ ನಿಮಗೇ ತಾನೇ?" ಒಟ್ಟಿಗೇ ಹೊಡಕೊಂಡರು ಇದ್ದೋರೆಲ್ಲಾ.

ಕಾಶೀಪತಯ್ಯ... ಅವರು ಸ್ವಲ್ಪ ತಲೆಹರಟೆ ಸ್ವಭಾವದೋನು - ಹೇಳಿದ:

"ಸಾರ್ ನೀವು ಲೈನ್‌ನಲ್ಲಿ ಮೊದಲೂ ಅಂತ ಮಲಗಿದ್ದೀರಿ ಅಂದ್ರೆ ಎಲ್ಲರಿಗೂ ಒಂದ್ ಥರಾ safety ನೂ ಇದ್ದ ಹಾಗಿರತ್ತೆ ಅನ್ನಬಹುದೂ ಸಾರ್... ನಿಮ್ಮ ಆ ಪಟ್ಟಾಂಪಟ್ಟಿ ಟೀ ಷರಟು ಹಾಕ್ಕೊಂಡು ಮಲಗಿದ್ದೀರಿ ಅಂತಂದ್ರೆ ಒಳ್ಳೆ road-hump ಥರಾನೇ ಇರತ್ತೆ ಸಾರ್ ನೋಡೋರಿಗೆ... ಆ ನಿಮ್ಮ ದೇಹದ್ದು ಭೂ ಮಧ್ಯ ರೇಖೇ ಅನ್ನೋದು ಕೊಂಚ..."

"ನಿಮ್ಮ ಕುಚೋದ್ಯದ ಮಾತಿಗೆಲ್ಲಾ ಬೇರೇನೇ ಬೇಕಾದಷ್ಟು ಟೈಮಿರತ್ತೆ, ಕಾಶೀಪತಯ್ಯನೋರೆ... ಆಯಿತು, ನಾಡಿದ್ದಿನ ದಿನ ಲೈನಲ್ಲಿ ನಾನೇ ಮೊದಲು ಇರತೀನಿ, ಸಂತೋಷಾನಾ?... so, ಹಾಗಾದ್ರೆ ಶನಿವಾರ ಹನ್ನೊಂದಕ್ಕೆ ಎಲ್ಲಾರೂನೂ spot ನಲ್ಲಿ ಹಾಜರಾಗಬೇಕು, ತಿಳೀತೆ... ಲೇಟ್ ಮಾಡ್ಕೊಂಡು ಬರೋದೂ, ಚಕ್ಕರ್ ಹಾಕೋದು ಯಾರೂ ಮಾಡಬಾರದು.... ಅದೊಂದೇನೇ ನನ್ನ ಪ್ರಾರ್ಥನೆ... good-luck and God-speed"

ಆದ್ರೆ ಶನಿವಾರದ ದಿನ? ಚಲಯವಯ್ಯನೋರೇನೋ ಹತ್ತೂಮುಕ್ಕಾಲಿಗೆನೇ ಬಂದರು... ಸೋಮಯ್ಯ ಗಾಡೀ ಕೆಟ್ಟೋಗಿತ್ತು, ದಾರೀಲಿ ಅಂತ ಹೇಳಿಕೊಂಡು ಹನ್ನೊಂದು ಹತ್ತಕ್ಕೆ ಬಂದ... ಆದ್ರೆ ಮಿಕ್ಕೋರು? ... ಹನ್ನೊಂದೂ ಕಾಲು... ಹನ್ನೊಂದೂವರೆ... ಹನ್ನೊಂದೂಮುಕ್ಕಾಲು ಆಯಿತು - ಒಬ್ಬ ಬೇಕೂಫ಼ ಬಂದಿದ್ರೆ ಕೇಳಿ.

"ಹಜಾಮತ್ ಆಗೋಗ್ತಾ ಇದ್ಯಲ್ಲ, ಸೋಮಯ್ಯ ನಮ್ಮ ಚಳುವಳೀ! ಹೋಗಿ ಕೊಂಚ ನೋಡ್ಕೊಂಡು ಬರ್ತೀರಾ, ಏನು ಮಾಡ್ತಾ ಇವೆ ಈ ಗೂಬೆಗಳೂ ಅಂತ?"

ಇನ್ನೇನು ಲಾರಿಗಳು ಹೊರಡೋಕ್ಕೆ ಶುರೂ ಆಗಬೇಕು, ಆವಾಗ ಬಂದ ಸೋಮಯ್ಯ... ತಲೆ ತಲೆ ಚಚ್ಕೊತಾ.

''ಭಾರೀ ಮೋಸಾ ಆಗಿಹೋಗಿದೆ, ಸಾರ್... ಬಾರೀ ಮೋಸಾ... ಆ ಗಂಗಾಧರನ್ ನಮ್ಮನ್ನೆಲ್ಲಾ ತಗೊಂಡು ಹೋಗಿ ಆ ಗಂಗೇನಲ್ಲೇ ಮುಳುಗಿಸಿ ಬಿಟ್ಟಿದ್ದಾನೆ, ಸಾರ್...''

''ಏನಾಗ್ತಾ ಇದೇ ಅನ್ನೋದನ್ನ ನೆಟ್ಟಗೆ ಹೇಳಬಾರದೆ? ಸುಮ್ಮನೆ ಮೋಸಾ, ಮೋಸಾ ಅಂತ ಹೊಡಕೋತಾ ಇದ್ರೆ ಯಾವನಿಗೆ ಅರ್ಥವಾಗಬೇಕು?...''

''ನಿನ್ನೇ ರಾತ್ರಿ ಏನಾಯ್ತಂತೆ ಗೊತ್ತಾ, ಸಾರ್? ಎಂಟೂವರೆ ಹೊತ್ಗೆ, ಅಂದ್ರೆ ನಮ್ಮೋರೆಲ್ಲಾ ಊಟಕ್ಕೆ ಕೂತಿರೋ ಟೈಂನಲ್ಲಿ ಒಬ್ಬೊಬ್ಬರ ಮನೇಗೂ ಈ ಗಂಗಾಧರನ್ ಜನಗಳನ್ನ ಕಳಿಸಿದ್ದನಂತೆ... ಏನು ತಗೊಂಡು? ಅರ್ಧರ್ಧ ಕೇಜಿ ಸಲ್ಲೈವಾ ಚಟ್ನೀಪುಡೀದು ಪೊಟ್ಟಣಗಳಂತೆ... with the compliments of Gowders' Powders ಅಂತ ಕಾರ್ಡುಗಳ ಜತೇನಲ್ಲಿ... ಮತ್ತೆ ಅವರದ್ದು ಚಿತ್ರಾನ್ನದ ಗೊಜ್ಜಿನ ಪುಡೀ ಅಂತಲ್ಲ, ಅದೂ ಕೂಡಾ trial batch ಅಂತ ಒಂದಿಷ್ಟು ರೆಡೀ ಮಾಡಿದ್ದಾರಂತೆ. ನಮ್ಮ group ನವರಿಗೇ ಸ್ಪೆಷಲ್ಲಾಗಿ ಅಂತ ಈವತ್ತಿನ ದಿನ ಹನ್ನೆರಡು ಗಂಟೇ ಹೊತ್ಗೆ... ಅಂದ್ರೆ ಇಲ್ಲಿಂದ ಲಾರಿಗಳು ಹೊರಡೋ ಟೈಮಿಗೆ ಅಲ್ಲಿ ಅವರ ಮನೆಗಳ ಹತ್ರದ್ ಛತ್ರದಲ್ಲಿ demonstration ಇಟ್ಕೊಂಡಿದ್ದಾರಂತೆ... ಗೊಜ್ಜಿನ ಚಿತ್ರಾನ್ನಾನ್ನ ಜರ್ಮನೀನೋನು ಮಾಡಿ ತೋರಿಸ್ತಾನಂತೆ... ಧಂಡಿಯಾಗಿ ಮಾಡಿರತಾರಂತೆ, ಎಷ್ಟು ಬೇಕಾದ್ರೂ ತಿನ್ನಬಹುದಂತೆ, ಕ್ಯಾರಿಯರ್‌ರ್‌ಗೂ ಹಾಕಿಕೊಡತಾರಂತೆ, ಬೇಕಾದ್ರೆ''


''ನಮ್ಮೂರಿನೋರು ಕಿಟ್ಟಮ್ಮ, ಪುಟ್ಟಮ್ಮ ಅನ್ನೋರು ಮಾಡೋ ಪುಡೀಗಳ ಮುಂದೆ ಅದರದ್ದೇನು ನಡಿಯತ್ತೆ? ಬರಬಹುದು ಬಿಡಿ, ನಮ್ಮೋರು... ಪುಣ್ಯಕ್ಕೆ ಲಾರಿಗಳು ಸ್ಟಾರ್ಟ್ ಆಗತಾ ಇಲ್ಲವಂತೆ, ಒಳಗಡೆ...''

''ಅಲ್ಲೇ ಸಾರ್, ನೀವು ತಪ್ಪು ಮಾಡತಾ ಇರೋದು... ನಿನ್ನ ಕೊಟ್ಟ ಪುಗಸಟ್ಟೆ ಚಟ್ನೀಪುಡಿ ತುಂಬಾನೇ ರುಚಿಯಾಗಿತ್ತಂತೆ... ಇನ್ನೂ ಬೇಕು, ಇನ್ನೂ ಬೇಕು ಅನ್ನೋ ಥರಾ... ಆಮೇಲೆ ಇನ್ನೊಂದು special attratcion ಅಂತೆ... ಇವತ್ತು ಹಾಜರ್ ಆಗಿರೋ ಎಲ್ಲಾರಿಗೂನೂ ಒಂದು discount card ಕೊಡತಾರಂತೆ. ಅದನ್ನ ತೋರಿಸಿದ್ರೆ ಎಲ್ಲಿ ಬೇಕಾದ್ರುನೂ ಯಾವಾಗ ಬೇಕಾದ್ರೂನೂ 20% discount... on all Gowder's Powders products ಮೇಲೆ ಕೊಡತಾರಂತೆ... ಹಾಗಾಗಿ...''

''ಗೊಜ್ಜಿನ ಚಿತ್ರಾನ್ನಾ ಅಂತ ಅವರುಗಳು ಅಲ್ಲಿ ಕೂತಿದ್ರೆ ಇಲ್ಲಿ ನಮ್ಮ ಚಳುವಳಿ?...''

''ಗೊಜ್ less ಚಿತ್ರಾನ್ನ, ಅಷ್ಟೇ... ಅದನ್ನ ಬಿಡಿಸಿ ಬೇರೆ ಹೇಳಬೇಕೆ?''

★★★



ಯಾಕಿಷ್ಟು ಲೇಟು ರೀ...

ರಾತ್ರಿ ವೇಳೆ ಕಳ್ಳರು, ಯಾರಾದ್ರೂ

ನಮ್ಮ ಪರಿಚಯದವರನ್ನ ಕರ್ಕೊಂಡು

ಬಂದು ಬಾಗಿಲು ತೆಗೆಸಿ

ದರೋಡೆ ಮಾಡ್ತಾರಂತೆ...!!

ಅದಕ್ಕೇ ನೀವು ಬೆಳಗಿನವರೆಗೂ ಹೊರಗೇ ಇರೀಂದ್ರೆ...!!

ಸಾರೀರೀ.!!!

ಸ್ಪೇಸ್ ಷಟಲ್ ಮತ್ತು ಕುದುರೆಯ ಹಿಂಭಾಗ

- ಶಿವು

ಮೊನ್ನೆ ಸಂಜೆ ಅಣ್ಣಪ್ಪ ಮನೆಗೆ ಬಂದಿದ್ದ. ''ಹಾಗೇ ತಿರುಗಾಡಿಕೊಂಡು ಬರೋಣ ಬಾರೋ'' ಅಂತ ನನ್ನನ್ನ ಕರೆದ. ಅವನು ಹೀಗೆ ಕರೆದಾಗಲೆಲ್ಲಾ ಇವನು ಎಲ್ಲಿಗೆ ಕರೀತಿದಾನೆ ಅಂತ ನನಗೆ ಖಂಡಿತವಾಗಿ ತಿಳಿದಿರುತ್ತೆ. ಅಣ್ಣಪ್ಪನಿಗೆ ರೈಲುಗಳು ಅಂದರೆ ವಿಪರೀತ ಆಸಕ್ತಿ. ಮಲ್ಲೇಶ್ವರಕ್ಕೆ ಬಂದು ಮಲ್ಲೇಶ್ವರಂ ರೇಲ್ವೇ ಸ್ಟೇಷನ್‌ಗೆ ಹೋಗದವರುಂಟೇ. ಸ್ಟೇಷನ್ನಿಗೆ ಹೋಗಿ ಅಲ್ಲಿನ ಕಲ್ಲು ಬೆಂಚಿನ ಮೇಲೆ ಕುಳಿತು ಅಲ್ಲಿ ಹಾದುಹೋಗುವ ಪುಷ್‌ಪುಲ್, ಕರ್ನಾಟಕ ಎಕ್ಸ್‌ಪ್ರೆಸ್ ಇವೇ ಮುಂತಾಗಿ ಎಲ್ಲ ರೈಲು ಬಂಡಿಗಳನ್ನೂ ಕಣ್ಣುತುಂಬಾ ನೋಡಿ ಆನಂದಿಸಿ ಕೊನೆಗೆ ಬಿಡಲಾಗದ ಮನಸ್ಸಿನಿಂದ ಅಲ್ಲಿಂದ ಬಿಟ್ಟುಬರುವುದು ಅಣ್ಣಪ್ಪನ ಎಂದಿನ ಪರಿಪಾಠ. ''ವಯಸ್ಸು ಎಪ್ಪತ್ತಾರಾಯಿತು, ಇನ್ನು ಭಗವದ್ಗೀತೆ, ಈಶಾವಾಸ ಅಂತ ಕಾಲಹಾಕೋದು ಬಿಟ್ಟು ಹೀಗೆ ಚಿಕ್ಕ ಹುಡುಗರ ತರಹ ರೈಲು ನೋಡ್ತೀಯಲ್ಲಾ ಅಣ್ಣಪ್ಪಾ'' ಅಂತ ನನ್ನ ಹೆಂಡ್ತಿ ಹಾಸ್ಯ ಮಾಡಿದರೆ, ''ನಿನಗೇನು ಗೊತ್ತು ರೈಲು ಬಂಡಿ ನೋಡೋ ಮಜಾ, ಅದಮ್ಯ ಚೈತನ್ಯ ಇರೋ ಇಂಜಿನ್, ರಾಜ ಗಾಂಭೀರ್ಯದಿಂದ ಸ್ಟೇಷನ್‌ಗೆ ಬರೋ ಠೀವಿ, ಅದರ ಹಿಂದೆ ಗಾಡಿಗಳು ಅತ್ಯಂತ ವಿಧೇಯತೆಯಿಂದ ಯಜಮಾನನನಲ್ಲಿ ಅನನ್ಯ ಭಕ್ತಿ ಇರಿಸಿ ಅವನನ್ನು ಹಿಂಬಾಲಿಸುವ ಶ್ರದ್ಧೆ, ಅನಂತರ ಇಂಜಿನ್ ಗಜರಾಜನಂತೆ ನಿಧಾನವಾಗಿ ಹೊರಟು ಕ್ರಮೇಣ ವೇಗವನ್ನು ಹೆಚ್ಚಿಸಿಕೊಳ್ಳುವ ಪ್ರಬುದ್ಧತೆ, ಎಲ್ಲಕ್ಕಿಂತ ಮಿಗಿಲಾಗಿ ಇಡೀ ರೈಲುಬಂಡಿ ಚಂಚಲಮನಸ್ಸಿಲ್ಲದೇ, ಎಡಬಲಕ್ಕೆ ಅಡ್ಡಾಡದೇ, ಏಕಾಗ್ರತೆಯಿಂದ ಕಂಬಿಗಳ ಮೇಲೆ ಚಲಿಸಿ ತನ್ನ ಗುರಿಯತ್ತ ನುಗ್ಗುವ ಕರ್ಮ ಕೌಶಲ್ಯ ಇವುಗಳಲ್ಲಿ ಅಡಗಿರೋ ಸತ್ಯ, ದರ್ಶನ ಯಾವ ಈಶಾವಾಸದಲ್ಲಿ ಸಿಗುತ್ತೆ ಹೇಳು'' ಅಂತ ಏನೇನೋ ಬುರುಡೆ ಬೊಗಳಿ ಅವಳಬಾಯಿ ಮುಚ್ಚಿಸಿಬಿಡುತ್ತಾನೆ.

ಎಂದಿನಂತೆ ಆ ಸಂಜೆ ಸಹಾ ನಾವು ಸ್ಟೇಷನ್ನಿಗೆ ಹೋಗಿ ಅಲ್ಲಿನ ಕಲ್ಲು ಬೆಂಚಿನ ಮೇಲೆ ಕೂತೆವು. ಇನ್ನೂ ಯಾವ ಗಾಡಿಯೂ ಬಂದಿರಲಿಲ್ಲ. ಸ್ವಲ್ಪ ಹೊತ್ತು ಅಣ್ಣಪ್ಪ ರೈಲು ಕಂಬಿಗಳನ್ನೇ ನಿಟ್ಟಿಸುತ್ತಾ ಆನಂದದ ಸಮಾಧಿಯಲ್ಲಿದ್ದಂತೆ ಕಾಣಿಸಿತು. ಒಮ್ಮೆಲೇ ಅಣ್ಣಪ್ಪ ಸಮಾಧಿಯಿಂದ ಹೊರಬಂದ, ''ಈ ರೈಲು ಹಳಿಗಳ ನಡುವೆ ಎಷ್ಟು ಅಂತರ ಇದೆ ಗೊತ್ತೇನು?'' ಅಣ್ಣಪ್ಪನ ಈ ಪ್ರಶ್ನೆಗೆ ನನ್ನಲ್ಲಿ ಸಿದ್ಧ ಉತ್ತರ ಇರಲಿಲ್ಲ. ಯಾವಾಗಲೋ ಪೂರ್ವಾಶ್ರಮದಲ್ಲಿ, ಮಿಡ್ಲ್ ಸ್ಕೂಲಿನಲ್ಲಿ ಭೂಗೋಳದ ಪಾಠ ಓದುತ್ತಿದ್ದಾಗ ಇದನ್ನೆಲ್ಲಾ ಓದಿದ್ದ ನೆನಪು.

‘‘ಐದೋ, ಐದೂವರೆಯೋ ಅಡಿ ಇರಬಹುದೇನೋ’’ ಅಂತ ಒಂದು ಅಂದಾಜನ್ನು ಎಸೆದೆ.

‘‘ಸರಿಯಾಯ್ತು, ಇಂಜಿನಿಯರಾಗಿ ಸಾರ್ಥಕ. ಉತ್ತರ ಹೇಳೋವಾಗ ನಿಖರತೆ ಇರಬೇಕು ಮರಿ. ಐದೂವರೆ ಅಡಿ. ಈಗ ಹೇಳು ಅದನ್ನ ಐದೂವರೆ ಅಡಿನೇ ಯಾಕೆ ಇಟ್ಟಿದಾರೆ? ಐದೂಕಾಲು ಅಥವಾ ಐದೂ ಮುಕ್ಕಾಲು ಯಾಕೆ ಇಟ್ಟಿಲ್ಲ?’’ ಇದೊಳ್ಳೇ ಪೀಕಲಾಟಕ್ಕೆ ಬಂತಲ್ಲಾ. ಬೆಳೆಯುವ ಅವಮಾನಾನ ಮೊಳಕೆಯಲ್ಲೇ ಚಿವುಟು ಅನ್ನೋ ಗಾದೇನ ಅನುಸರಿಸಿ ‘‘ಅಣ್ಣಪ್ಪಾ ನೀನು ಈಗ ಕೇಳ್ತಿರೋ, ಮುಂದೆ ಕೇಳೋ ಯಾವ ಪ್ರಶ್ನೆಗೂ ನನ್ನಲ್ಲಿ ಉತ್ತರ ಇಲ್ಲ. ನೀನೇ ಪ್ರಶ್ನೆ ಕೇಳಿ ನೀನೇ ಉತ್ತರಿಸಿದರೆ ನನ್ನ ಅಭ್ಯಂತರ ಏನೂ ಇಲ್ಲ’’ ಅಂತ ಹೇಳಿ ಸುಮ್ಮನಾದೆ. ನನ್ನ ಉತ್ತರದಿಂದ ಅವನ ಉತ್ಸಾಹಕ್ಕೆ ತಣ್ಣೀರೆರೆಚಿದಂತೇನೂ ಕಾಣಲಿಲ್ಲ.

‘‘ಸರಿ, ನಾನೇ ಹೇಳ್ತೀನಿ. 1853 ರಲ್ಲಿ ಬ್ರಿಟಿಷ್ ಇಂಜಿನಿಯರ್‌ಗಳು ಭಾರತದಲ್ಲಿ ಥಾನೆ, ಮುಂಬೈ ನಡುವೆ ಮೊದಲ ರೈಲುಹಳಿಗಳನ್ನು ಹಾಸಿದಾಗ ಅದರ ಮೇಲೆ ಓಡುವ ಬಂಡಿಗಳನ್ನು ಬ್ರಿಟನ್ನಿನಿಂದಲೇ ಆಮದು ಮಾಡಬೇಕಾಗಿತ್ತು. ಆ ಬಂಡಿಗಳ ಚಕ್ರಗಳ ನಡುವಣ ಅಂತ ಐದೂವರೆ ಅಡಿ. ಹಾಗಾಗಿ ಕಂಬಿಗಳ ಅಂತರವೂ ಅಷ್ಟೆ ಇರಬೇಕಾದದ್ದು ಸಹಜ. ನೀನು ಕೇಳಬಹುದು, ಬ್ರಿಟನ್ನಿನಲ್ಲಿ ಬಂಡಿಗಳ ಚಕ್ರಗಳ ನಡುವಣ ಅಂತರ ಐದೂವರೆ ಯಾಕೆ ಇಟ್ಟರು ಅಂತ. ಅದಕ್ಕೂ ಕಾರಣ ಇದೆ. ಅಲ್ಲಿ ಮೊದಲ ರೈಲು ಬಂಡಿಗಳನ್ನು ಆ ತನಕ ಬಳಕೆಯಲ್ಲಿದ್ದ ಟ್ರಾಮ್ ಬಂಡಿಗಳ ವಿನ್ಯಾಸವನ್ನ ಆಧರಿಸಿ ತಯಾರಿಸಿದ್ದರು. ಹದಿನೆಂಟನೆಯ ಶತಮಾನದ ಟ್ರಾಮ್ ಬಂಡಿಗಳ ಚಕ್ರಗಳ ಅಂತರ ಎಷ್ಟಿತ್ತು ಗೊತ್ತಾ?’’

‘‘ಐದೂವರೆ ಅಡಿ!!’’ ನಾನು ವಿಜಯದ ನಗೆ ಬೀರಿದೆ.

‘‘ಕರೆಕ್ಟ್. ಆದರೆ ಯಾಕೆ ಅಷ್ಟೇ ಇತ್ತು ಅನ್ನೋ ಪ್ರಶ್ನೆಗೂ ಉತ್ತರ ಇದೆ. ಟ್ರಾಮ್ ಬಂಡಿಗಳ ತಯಾರಕರು, ಅದಕ್ಕೆ ಮೊದಲು ಬಳಕೆಯಲ್ಲಿದ್ದ ರಸ್ತೆ ಕೋಚುಗಳ ಚಕ್ರಗಳ ಅಳತೆಯನ್ನೇ ಬಳಸಿ ಟ್ರಾಮ್ ಬಂಡಿಗಳನ್ನು ನಿರ್ಮಿಸಿದರು. ಆಗಿನ ಕಾಲದಲ್ಲಿ ರಸ್ತೆ ಬಂಡಿಗಳ ಮರದ ಚಕ್ರಗಳು ರಸ್ತೆಗಳಲ್ಲಿದ್ದ ಎರಡು ಕಣಿವೆಯಂತಹ ನೀಳ ಹಳ್ಳಗಳ ಜಾಡಿನಲ್ಲೇ ಓಡುತ್ತಿದ್ದವು. ಈಗಲೂ ನಮ್ಮ ಹಳ್ಳಿಗಳ ಕಡೆ ಎತ್ತಿನ ಗಾಡಿಗಳ ಓಡಾಟದಿಂದ ಉಂಟಾದ ಹಳುವಿನಲ್ಲಿ ನಮ್ಮ ಪಟ್ಟಣದ ಕಾರುಗಳನ್ನು ಓಡಿಸುಲ್ಲವೇ ಆ ರೀತಿ. ಆ ಹಳುಗಳ ನಡುವಳ ನಂತರ ಬಂಡಿಗಳ ಚಕ್ರಗಳ ಅಂತರವನ್ನು ನಿರ್ಧರಿಸಿತ್ತು. ಬ್ರಿಟನ್ನಿನಲ್ಲಿ ಈ ರಸ್ತೆ ಹಳುಗಳಿಗೆ ಒಂದು ಸುಧೀರ್ಘ ಚರಿತ್ರೆ ಇದೆ. ರೋಮನ್ನರ ಸಾಮ್ರಾಜ್ಯ ಬ್ರಿಟನ್ನಿನವರೆಗೂ ಹರಡಿದ್ದಾಗ ರೋಮನ್ ಯೋಧರ ರಥಗಳು ಸತತವಾಗಿ

ಓಡಾಟ ನಿರ್ಮಿತವಾದ ಹಾದಿಗಳಿವು... ಹಾಗಾಗಿ ರೋಮನ್ ರಥಗಳ ಚಕ್ರಗಳ ನಡುವಣ ಅಂತರವೇ ಈ ರಸ್ತೆ ಜಾಡುಗಳಿಗೆ ವರ್ಗಾವಣೆಯಾಗಿತ್ತು...''

''ಒಂದ್ನಿಮಿಷ ಅಣ್ಣಪ್ಪ, ರೋಮನ್ ರಥಗಳ ಚಕ್ರಗಳ ಅಂತರ ನಮ್ಮ ಇಂಟನ ರೈಲುಹಾದಿಯ ಸ್ವರೂಪಾನ ನಿರ್ಧರಿಸಿತು ಅಂತೀಯಾ?''

''ನಿಸ್ಸಂಶಯವಾಗಿ. ಇಷ್ಟಾದರೂ ನಮ್ಮ ಮೂಲ ಪ್ರಶ್ನೆಗೆ ಉತ್ತರ ದೊರಕಿದಂತಾಗಲಿಲ್ಲ. ರೈಲು ಕಂಬಿಗಳ ನಡುವಣ ಅಂತರ ಐದೂವರೆ ಅಡಿಯಷ್ಟೇ ಏಕಿರಬೇಕು ಎಂಬುದಕ್ಕೆ ಬದಲಾಗಿ ರೋಮನ್ ರಥಗಳ ಚಕ್ರಗಳ ಅಂತರ ಅಷ್ಟೇ ಏಕಿತ್ತು ಎಂದು ಪ್ರಶ್ನೆಯ ಸ್ವರೂಪ ಬದಲಾಯಿತು ಅಷ್ಟೇ. ಈ ಪ್ರಶ್ನೆಗೆ ಉತ್ತರ ಹುಡುಕತೊಡಗಿದಾಗ ಒಂದು ಸ್ವಾರಸ್ಯಕರ ಅಂಶ ಗೊತ್ತಾಯ್ತು. ರೋಮನ್ನರು ತಮ್ಮ ರಥಗಳನ್ನ ಅದರಲ್ಲೂ ಯೋಧರು ಬಳಸುತ್ತಿದ್ದ ಯುದ್ಧ ರಥಗಳನ್ನ ಅತ್ಯಂತ ಸಮರ್ಥವಾಗಿ ನಿರ್ಮಿಸುತ್ತಿದ್ದರು. ಯಾವ ಒಂದು ಭಾಗವನ್ನೂ ಅನಾವಶ್ಯಕವಾಗಿ ಹಿರಿದಾಗಿಸುತ್ತಿರಲಿಲ್ಲ. ಹಾಗಾಗಿ ರಥದ ಅಗಲವನ್ನ ರಥವನ್ನೆಳೆಯುವ ಕುದುರೆಯ ಹಿಂಭಾಗದ ಅಗಲಕ್ಕೆ ಸರಿದೂಗಿಸಿ ಅನಂತರ ಆ ರಥಕ್ಕೆ ಚಕ್ರಗಳನ್ನ ಅಳವಡಿಸಿದಾಗ ಈ ಐದುವರೆ ಅಡಿ ಉದ್ಭವವಾಯಿತು. ಅದಕ್ಕೇ ಈಗ ಈ ರೈಲು ಕಂಬಿಗಳನ್ನ ನೋಡಿದಾಗ ರೋಮನ್ ಕುದುರೆ ತಿ...''

''ಷ್... ಇದು ಪಬ್ಲಿಕ್ ಜಾಗಾನೋ ಅಣ್ಣಪ್ಪ, ಕುದುರೆ ಹಿಂಭಾಗ ಅನ್ನು...''

''ಏನೋ ಒಂದು. ಅಂತೂ ನನ್ನ ಕಥೆ ಇಷ್ಟಕ್ಕೇ ಮುಗಿದಿಲ್ಲ. ಅಮೆರಿಕಾದಲ್ಲೂ ಬ್ರಿಟಿಷ್ ಮೂಲದವರೇ ಮೊದಲ ರೈಲುಹಾದಿಗಳನ್ನು ಕಟ್ಟಿದ್ದರಿಂದ ಅಲ್ಲಿಯೂ ಸಹಾ ಇದೇ ಹಣೇಬರಹ. ಅಮೇರಿಕನ್ ಸ್ಪೇಸ್ ಷಟಲ್ ನೋಡಿದೀಯಲ್ಲಾ, ಅದಕ್ಕೆ ಎರಡು ಸಾಲಿಡ್ ರಾಕೆಟ್ ಬೂಸ್ಟರ್‌ಗಳನ್ನ ಜೋಡಿಸಿರುತ್ತೆ. ಒಂದೊಂದು ಬೂಸ್ಟರಿನ ವ್ಯಾಸವೂ ಐದೂವರೆ ಅಡಿ. ಯಾಕೆ ಗೊತ್ತೇ? ಈ ಬೂಸ್ಟರುಗಳನ್ನು ದೂರದ ಯೂಟಾ ಎಂಬ ಊರಿನಲ್ಲಿ ನಿರ್ಮಿಸಿ ಈ ಲಾಂಚಿಂಗ್ ಪ್ಯಾಡ್‌ಗೆ ರವಾನಿಸಬೇಕಾಗುತ್ತೆ. ಬೂಸ್ಟರಿನ ಸಾಗಣೆ ರೈಲುಗಾಡಿಯ ಮೂಲಕವೇ. ಈ ರೈಲುಹಾದಿ ಒಂದು ಬೆಟ್ಟದಲ್ಲಿ ಕೊರೆದಿರುವ ಸುರಂಗದಲ್ಲಿ ಹಾದುಬರುತ್ತೆ. ಸುರಂಗದ ಅಳತೆ ರೈಲುಗಾಡಿಯ ಅಳತೆಗೆ ಕಿಂಚಿತ್ ಹೆಚ್ಚು ಅಷ್ಟೆ. ಇಂತಹ ಇಕ್ಕಟ್ಟಿನ ಸುರಂಗದಲ್ಲಿ ಹಾದು ಬರಬೇಕಾದರೆ ಬೂಸ್ಟರ್ ಐದರೂವರೆ ಅಡಿಗಿಂತ ಹೆಚ್ಚಿರುವುದು ಅಸಾಧ್ಯ. ಹಾಗಾಗಿ ಇಪ್ಪತ್ತನೆಯ ಶತಮಾನದ ಸ್ಪೇಸ್ ಷಟಲ್ ಭಾಗಗಳೂ ಅನುಸರಿಸಬೇಕಾದ ಅಳತೆಯೆಂದರೆ ಸೀಜರನ ಕಾಲದ ರೋಮನ್ ಕುದುರೆಗಳ.....''

ನಾನು ಬೇಗ ''ಹಿಂಭಾಗ'' ಅಂತ ಸೇರಿಸಿದೆ.

... ಬೌವಿ್ೕನ್ ಸಾರ್!

ಹೆಚ್. ಗೋಪಾಲಕೃಷ್ಣ

ಐದಾರು ವರುಷದ ಹಿಂದಿನ ಮಾತು. ಮನೆ ಮುಂದಿನ ನಲವತ್ತು ಅರವತ್ತರ ಜೋಡಿ ಸೈಟಿನಲ್ಲಿ ಇಡೀ ನಮ್ಮ ಏರಿಯಾದ ಹತ್ತು ಹದಿನೈದರ ವಯಸ್ಸಿನ ಹುಡುಗರು ಕ್ರಿಕೆಟ್ ಆಡುತ್ತಿದ್ದರು. ಅವರ ಸಂಗಡ ಮಿಡ್ಲ್ ಏಜಡ್ ನವರು ಅಂತ ಅನಿಸಿಕೊಂಡ ನಾವೂ ಸೇರುತ್ತಿದ್ದೆವು. ನಮ್ಮನೇನೂ ಸೇರಿದ ಹಾಗೆ ಸುತ್ತಮುತ್ತಲಿನ ಮನೆಗಳ ಕಿಟಕಿ ಗಾಜುಗಳು ನಮ್ಮ ಕ್ರಿಕೆಟ್ ಆಟದಲ್ಲಿ ಟಾರ್ಗೆಟ್ ಆಗುತ್ತಿತ್ತು ಮತ್ತು ಮನೆಯ ಯಜಮಾನರುಗಳು ಒಂದು ರೀತಿ ಹೇಳಲಾಗದ ಸಂಕಟವನ್ನು ಒಳಗೊಳಗೆ ಅನುಭವಿಸುತ್ತಿದ್ದರು. ಇದರ ಜೊತೆಗೆ ಕ್ರಿಕೆಟ್ ಆಡುವವರನ್ನ ನೀವು ಗಮನಿಸಿರುವಿರೋ ಇಲ್ಲವೋ. ಊಟ ತಿಂಡಿ ಕಾಫಿ ನಿದ್ರೆ ಇವು ಯಾವುವೂ ಈ ಆಟಗಾರರಿಗೆ ಬೇಕಿಲ್ಲ. ಬೆಳಿಗ್ಗೆ ಆಟದ ಮೈದಾನಕ್ಕೆ ಇಳಿದರೆ ಸಂಜೆ ಕತ್ತಲು ಹಬ್ಬಿ ಕಣ್ಣಿಗೆ ಟೆನ್ನಿಸ್ ಬಾಲು ಕಾಣಿಸುವುದಿಲ್ಲ ಅಂದಾಗಲೇ ಇವು ಮನೆ ಸೇರುತ್ತಿದ್ದದ್ದು. ಮಕ್ಕಳನ್ನ ಕಾಫಿ ಸಮಯಕ್ಕೆ ತಿಂಡಿ ಸಮಯಕ್ಕೆ ಊಟದ ಸಮಯಕ್ಕೆ ಸ್ನಾನದ ಸಮಯಕ್ಕೆ ಅಂತ ಹೀಗೆ ಆಯಾ ಸಮಯದಲ್ಲಿ ಎಳೆದುಕೊಂಡು ಹೋಗೋದಿಕ್ಕೆ ಅಂತಲೇ ಅಪ್ಪ ಅಮ್ಮಂದಿರು ಬಂದು ನಮ್ಮ ಮನೆ ಮುಂದೆ ಸೇರುತ್ತಿದ್ದರು. ಯಾವೋನು ಹಾಳಾದೋನು ಈ ಕ್ರಿಕೆಟ್ಟು ಕಂಡುಹಿಡಿದನೋ... ಎಂಬಲ್ಲಿಂದ ಹಿಡಿದು "ಈ ಸೈಟನ್ನ ಹೀಗೇ ಖಾಲಿ ಬಿಟ್ಟುಕೊಂಡಿರೋನಿಗೆ ನಾಲ್ಕು ತದಕಬೇಕು..." ಎಂಬಲ್ಲಿಯವರೆಗೆ ಈ ಅಪ್ಪ ಅಮ್ಮಂದಿರ ಯೋಚನೆ ಹರೀತಿತ್ತು.

ಸುತ್ತಮುತ್ತಲ ಮನೆಯ ಕಿಟಕಿ ಗಾಜು ಒಡೆಸಿಕೊಂಡವರು ಬಾಲನ್ನ ಬ್ಯಾಟನ್ನ ಕಸಿದುಕೊಂಡು ಒಂದೆರಡು ದಿವಸ ಮುಖವನ್ನು ದುಂ ಅಂತ ಇರಿಸಿಕೊಂಡರೂ, ಹಿರಿಯರು ನಾವೂ ಆಟದಲ್ಲಿ ಪಾಲುಗಾರರಾಗಿದ್ದರಿಂದ ವಿಧಿಯಿಲ್ಲದೇ ಗೊಣಗುತ್ತಲೇ ಬ್ಯಾಟು ಬಾಲು ಹಿಂತಿರುಗಿಸುತ್ತಿದ್ದರು. ಒಮ್ಮೆ ದೊಡ್ಡವರು ಸೇರಿಲ್ಲದಿರುವಾಗ ಬಾರಿಸಿದ ಚೆಂಡು ಸೈಟಿನ ಪಕ್ಕದಲ್ಲಿದ್ದ ಮನೆಯ ಕಿಟಕಿ ಗಾಜು ಒಡೆದು ಹಾಕಿಬಿಡ್ತು. ತಮಿಳಿನವರ ಮನೆ ಅದು. ಅತಿ ಆರ್ಭಟ ಮಾಡಿದ ಮನೆ ಯಜಮಾನಿ ಮಕ್ಕಳ ಹತ್ತಿರ ಬ್ಯಾಟು ಬಾಲು ವಿಕೆಟ್ಟು ಇವೆಲ್ಲವನ್ನೂ ಕಸಿದುಕೊಂಡು ಇಡೀ ಎರಡು ದಿನ ನಮ್ಮ ರಸ್ತೇನ ತನ್ನ ಬೈಗುಳದಿಂದ ಮುಚ್ಚಿ ಹಾಕಿಬಿಟ್ಟಳು. ಅವತ್ತಿನ ದುರ್ದೈವ (?) ಅಂದರೆ ನಮ್ಮ ಕುಲತಿಲಕನೂ ಟೀಂನಲ್ಲಿದ್ದದ್ದು.

ಅವತ್ತೇ ಕುಲತಿಲಕನನ್ನ ಕರೆದೆ. ಅಂಡರ್ ಆರ್ಮ್ ಬೋಲಿಂಗ್‌ನಲ್ಲಿ ಆಟ ಆಡ್ತೀ ಹೀಗಾದರೆ ಹೇಗೆ? ಅಂದೆ. ಅಂಡರ್ ಆರ್ಮ್ ಅಂದರೆ ಗೊತ್ತಲ್ಲಾ? ಚಿಕ್ಕವರಿದ್ದಾಗ

'ಬಚ್ಚೆ'ದ ಆಟವೋ 'ಲಗೋರಿ' ಆಟವೋ ಆಡಿದ್ದರೆ ನೆನೆಸಿಕೊಳ್ಳಿ, ನೇರ ನಿಂತು ಕೈಯನ್ನ ಬರೇ ಹಿಂದಕ್ಕೆ ತಗೊಂಡು ಹೋಗಿ ಆ ವೇಗದಲ್ಲೇ ಮುಂದಕ್ಕೆ ತಂದು ಚೆಂಡು ಎಸೆಯುವುದಕ್ಕೆ ಅಂಡರ್ ಆರ್ಮ್ ಅಂತ ಹೆಸರು. ಓವರ್ ಆರ್ಮ್ ಅಂದರೆ ಇದಕ್ಕೆ ವಿರುದ್ಧವಾದ ನಡೆ ಅಂದರೆ ಟೀವಿಗಳಲ್ಲಿ ಕ್ರಿಕೆಟ್ ಮ್ಯಾಚು ನೋಡಿದ್ದೀರಲ್ಲಾ, ಅಲ್ಲಿ ಬಿಳಿಯ ಬೋಲ್ ಮಾಡುತ್ತಾನೆ ನೋಡಿ ಅದೇ ಓವರ್ ಆರಮ್ಮು. ಅಂಡರ್ ಆರ್ಮ್ ಆಟವನ್ನ ಹುಡುಗೀರ ಆಟ ಅಂತ ರೇಗಿಸುವುದೂ ಉಂಟು. ಮಗನಿಗೆ ಅಂಡರ್ ಆರ್ಮ್ ಆಟ ಅಂತ ರೇಗಿಸಿದ ನಂತರ ''ನಾವೇನು ಯಾವಾಗಲೂ ಅಂಡರ್ ಆರ್ಮ್ ಆಡುಲ್ಲ ಎಲ್ಲೋ, ಅಪರೂಪಕ್ಕೆ...'' ಅಂದ. ಆದರೂ ಅಪ್ಪ, ಟೆನ್ನಿಸ್ ಬಾಲ್‌ನಲ್ಲಿ ಆಡಿದರೆ ಅದು ಆಟವೇ? ಕ್ರಿಕೆಟ್ ಅಂದರೆ ಲೆದರ್ ಬಾಲ್‌ನಲ್ಲಿ ಆಡಬೇಕು, ಕೈಕಾಲುಗಳಿಗೆ ಗ್ಲೋವ್ಸು ಪ್ಯಾಡು ಕಟ್ಟಬೇಕು... ಕ್ರಿಕೆಟ್ ಪಿಚ್‌ಗೆ ಮ್ಯಾಟು ಹಾಕಿರಬೇಕು.... ಅಂತ ದೀರ್ಘವಾಗಿ ಕ್ರಿಕೆಟ್ ಬಗೆಗೆ ನನಗೆ ತಿಳಿದಿದ್ದ ಅಲ್ಪಸ್ವಲ್ಪ ವಿವರಗಳನ್ನ ಬಿಟ್ಟೆ. ಕೊನೆಯದಾಗಿ ಹೇಳಿದೆ ಮನೆ ಮುಂದೆ ಆಟ ಆಡಬೇಡ. ಆ ತಮಿಳು ಹೆಂಗಸು ಹಾಕಿದ ಶಾಪಗಳೆಲ್ಲಾ ನಿಜ ಆಗಿಬಿಟ್ಟರೆ ಮುಂದೆ ನಮ್ಮ ರಸ್ತೆಯಲ್ಲಿನ ಯಾರದೇ ಮನೇನು ಮುಂದಿನ ನೂರು ವಂಶಗಳಾದರೂ ಕ್ರಿಕೆಟ್ ಆಟವನ್ನೇ ಆಡುವ ಹಾಗಿಲ್ಲ... ಅಂತ ಶಾಪದ ವಿವರ ನೀಡಿದೆ.

ಅವರಿಗೆ ಹೆದರಿ ಕ್ರಿಕೆಟ್ ಬಿಡಬೇಕೊ? ಊ ಹೂಂ.. ಅಂತ ಕುಲ ತಿಲಕ ತಲೆ ಆಡಿಸಿತು.

ಇದೇ ರೀತಿ ಎಲ್ಲರ ಮನೆ ಮಕ್ಕಳಿಗೂ ಅವರ ಅಪ್ಪನೋ ಅಮ್ಮನೋ ತಾಕೀತು ಮಾಡಿದ್ದರಿಂದಲೇ ಇರಬೇಕು, ಮಾರನೇ ದಿವಸ ಆಟಗಾರರ ಸಂಖ್ಯೆ ಶೇ. ಇಪ್ಪತ್ತರಷ್ಟು ಕಡಿಮೆ ಆಯಿತು, ಅದರ ಮಾರನೇ ದಿವಸ ಶೇ. ಮೂವತ್ತರಷ್ಟು, ಅದರ ಮಾರನೇ ದಿವಸ ಶೇ. ಐವತ್ತರಷ್ಟು!

ಒಂದು ವಾರದ ನಂತರ ಮನೆ ಸೇರುವ ಹೊತ್ತಿಗೆ ಹೆಂಡತಿ ಒಂದು ಸುದ್ದಿ ಹೇಳಿದಳು. ನಿಮ್ಮ ಫ್ಯಾಕ್ಟರಿ ಗ್ರೌಂಡ್‌ಗೆ ಹೋಗಿದಾನೆ ಕ್ರಿಕೆಟ್ ಆಡುಕ್ಕೆ... ಅಂತ. ಸ್ವಲ್ಪ ಹೊತ್ತಿನಲ್ಲೇ ಮನೆಗೆ ಮಗ ಹಿಂತಿರುಗಿದ. ಏನೋ ಟೀಮಿಗೆ ಸೇರ್ಕೊಂಡೆಯಾ? ಅಂತ ಕೇಳಿದೆ.

''ಇಲ್ಲ ಫ್ರೆಂಡ್ ಮನೆಗೆ ಹೋಗಿದ್ದೆ. ಫ್ರೆಂಡ್ ಹೇಳಿದ ನಿಮ್ಮ ಫ್ಯಾಕ್ಟರಿ ಗ್ರೌಂಡಿಗೆ ಅದ್ಯಾರೋ ಬೌರ್ವಿನ್ ಸಾರ್ ಅಂತ ಬರ್ತಾರಂತೆ. ಅವರನ್ನ ಕೇಳಿದರೆ ಸೇರಿಸ್ಕೊತಾರಂತೆ. ಸ್ವಲ್ಪ ವಿಚಾರಿಸ್ತೀಯಾ?... 'ಸರಿ' ಅಂತ ತಲೆ ಆಡಿಸಿದೆ. ಹಿಂದೆ ಒಂದು ಸಲ ಇದೇ ಕಂಠೀರವನನ್ನ ಅಂಡರ್ ಹನ್ನೆರಡು ಸೆಲೆಕ್ಷನ್‌ಗೆ ಅಂತ ಕ್ರಿಕೆಟ್ ಸ್ಟೇಡಿಯಂಗೆ ಕರೆದುಕೊಂಡು ಹೋಗಿದ್ದೆ ಬಣ್ಣ ಬಣ್ಣದ ಶರ್ಟು, ಚಪ್ಪಲಿ, ಪ್ಯಾಂಟು

ತೊಟ್ಟು ಅವನು ಬಂದಿದ್ದ. ಅಲ್ಲಿ ಕಾಣಿಸಿದ ಒಬ್ಬ ಆಂಗ್ಲೋ ಇಂಡಿಯನ್ ಹತ್ತಿರ ಸೆಲೆಕ್ಷನ್ ಗೂ ಇಂಗ್ಲಿಷ್ ನಲ್ಲಿ ವಿಚಾರಿಸಿದ್ದೆ. ಆತ ''ಹೂ ಈಸ್ ದಿ ಬಾಯ್?'' ಅಂತ ಕೇಳಿ ನನ್ನ ಮಗನನ್ನ ಮೇಲಿಂದ ಕೆಳಗಿನವರೆಗೆ ನೋಡಿ 'ಹಿ ಷುಡ್ ಕಂ ಇನ್ ಕ್ರಿಕೆಟ್ ಡ್ರೆಸ್ ವಿತ್ ಕಿಟ್ಸ್... ಮೋರ್ ಓವರ್ ಇಂಡುವಿಜುಯಲ್ ಎಂಟ್ರೀಸ್ ಆರ್ ನಾಟ್ ಅಕ್ಸಪ್ಟೆಡ್...' ಅಂತ ಕೈ ಆಡಿಸಿದ್ದ. ಅವತ್ತಿಂದ ಕ್ರಿಕೆಟ್ಟು ಅಂದರೆ ಆ್ಯಂಗ್ಲೋ ಇಂಡಿಯನ್ ಕೋಚ್ ಇರ್ತಾನೆ ಅಂತ ಅದ್ಯಾಕೋ ನನ್ನ ತಲೇಲಿ ಸೇರಿಹೋಗಿತ್ತು. ಈ ಬೌರ್ವಿನ್ ಸಾರ್ ಸಹ ಸದರಿ ಆಂಗ್ಲೊ ಇಂಡಿಯನ್ ತಳಿಗಳಲ್ಲಿ ಒಂದಿರಬಹುದು ಅಂತ ಅಂದ್ಕೊಂಡೆ. ಬೌರ್ವಿನ್ ಗೆ ಹುಡುಕಾಟ ಆರಂಭಿಸಿದೆ.

ಎರಡು ಮೂರು ದಿವಸ ಕಾರ್ಖಾನೇಲಿ ಕ್ರಿಕೆಟ್ ಆಡುವವರನ್ನ ಬೌರ್ವಿನ್ ಸಾರ್ ಬಗ್ಗೆ ವಿಚಾರಿಸಿದೆ. ಗೊತ್ತಿಲ್ಲ ಗೊತ್ತಿಲ್ಲ ಅಂಬೋ ಉತ್ತರ ಬಂದಿತು. ಅದ್ಯಾರೋ ಬೌರ್ವಿನ್ ಅನ್ನೋರು ಕ್ರಿಕೆಟ್ ಆಡ್ತಾರಲ್ಲಾ ಫ್ಯಾಕ್ಟರೀಲಿ ಅವರಿಗೇ ಗೊತ್ತಿಲ್ಲಕಣೋ ನೀನೇ ನಾಳೆ ಸಾಯಂಕಾಲ ಗ್ರೌಂಡಿಗೆ ಹೋಗು ಅದ್ಯಾರು ಬೌರ್ವಿನ್ ಸಾರೋ ನೀನೇ ಮಾತನಾಡಿಸು ಅಂದೆ. ಸರಿ ನಿನ್ನ ಕೈಲಿ ಏನು ಆಗುತ್ತೆ ಅಂತ ಗೊಣಗುತ್ತಾ ತಲೆ ಆಡಿಸಿದ. ಮೂರನೇ ದಿವಸ ಮನೆ ಸೇರಿದ್ದು ಲೇಟು. ಮಗ ಗ್ರೌಂಡಿಗೆ ಹೋಗಿದ್ದನಾ ಬೌರ್ವಿನ್ ಸಾರ್ ಸಿಕ್ಕಿದರಾ ಅದೆಲ್ಲಾ ಕೇಳುವುದು ಮರೆತು ಹೋಗುವಷ್ಟು ತಲೆ ತುಂಬಾ ಬೇರೇನೇನೋ ತರಲೆ ತಾಪತ್ರಯ. ತೆಪ್ಪಗೆ ಮಲಗಿದೆ.

ಮಾರನೇ ದಿವಸ ಕಾರ್ಖಾನೇಲಿ ಹಳೇ ಗೆಳೆಯ ಸಿಕ್ಕಿದ. ಈತನೂ ಕ್ರಿಕೆಟ್ ಆಟಗಾರ. ಏ ಬೌರ್ವಿನ್ ಸಾರ್ ಅಂತ ಯಾರೋ ನಿಮ್ಮ ಕ್ರಿಕೆಟ್ ಟೀಂನಲ್ಲಿ? ಅಂತ ಕೇಳಿದೆ.

ಆ ಹೆಸರಿನವರು ಯಾರು ಇಲ್ಲವಲ್ಲ... ಅಂದ. ''ಅದ್ಯಾರೋ ಬೌರ್ವಿನ್ ಸಾರ್ ಕೋಚ್ ಮಾಡ್ತಾರೆ ಅಂತ ನನ್ನ ಮಗ ಹೇಳ್ತಿದ್ದನಲ್ಲೋ... ಅಂದೆ.

'ಹೋ' ಅಂತ ಗೆಳೆಯ ನಕ್ಕ. ದೂರದಲ್ಲಿ ಹೋಗುತ್ತಿದ್ದ ಯಾರನ್ನೋ ಚಪ್ಪಾಳೆ ತಟ್ಟಿ ಕರೆದ.

ಇವರು ಗೋಪಾಲಕೃಷ್ಣ. ಅಂತ ತೋರಿಸಿದ. ಹೋ! ಗೊತ್ತು. ನಿನ್ನೆ ನಿಮ್ಮ ಮಗ ನಮ್ಮ ಟೀಮಿಗೆ ಸೇರಿದ. ನಿಮ್ಮ ಹೆಸರು ಹೇಳಿದ....! ಅಂದರು ಅವರು ಕುಳ್ಳಗೆ ಕಪ್ಪಗೆ ಸದೃಢವಾಗಿರುವ ಈತನೇ ಬೌರ್ವಿನ್ ಇರಬಹುದೇ ಅಂತ ತಲೆ ಒಂದೆರಡು ಸೆಕೆಂಡು ಚಿಂತಿಸುವಷ್ಟರಲ್ಲಿ ನನ್ನ ಗೆಳೆಯ ಆತನನ್ನ ನನಗೆ ಪರಿಚಯಿಸಿದ. ''ಇವರು ಬೋರಲಿಂಗ ಅಂತ. ಕ್ರಿಕೆಟ್ ಕೋಚ್ ಇವರೇನೇ...'' ಬೋರಲಿಂಗ- ಬೌರ್ವಿನ್ ಸಾರ್ ಆಗಿದ್ದು, ನನ್ನ ಮಗನಿಗೆ ಕೋಚ್ ಆಗಿದ್ದು ಹೀಗೆ! ಬೌರ್ವಿನ್ ಸಾರ್ ಕೋಚಿಂಗ್ ಹೇಗೆ ನಡೀತು ಅಂತ ಮುಂದೆ ನಿಮಗೆ ವಿವರವಾಗಿ ತಿಳಿಸ್ತೀನಿ.

★★★

ತಪ್ಪು ನಂದೇನಾ...?

- ಕೆ.ಬಿ. ವೀರಣ್ಣ ಕಣ್ಣಾಲ

ರಂಗಸ್ವಾಮಿ ರಂಗು ರಂಗಾಗಿ ಡ್ರೆಸ್ ಮಾಡಿಕೊಂಡು ತನ್ನ ಭಾವಿ ಪತ್ನಿ ಮುಟ್ಟಿವರೆ ಮುನಿ ಮಂಜುಳಳ ಮನೆಗೆ ಹೋದನು. ಮಂಜು ರಂಗುವಿನ ಆಗಮನ ಕಂಡು ಕರ್ಜೂರ ಕಂಡ ಎಲ್.ಕೆ.ಜಿ. ಮಕ್ಕಳ ಹಾಗೆ ಮನಸ್ಸು ಗರಿ ಬಿಚ್ಚಿ ಕುಣಿಯಿತು. ರಂಗುವಿನ ಭಾವಿ ಮಾವ ಭಾವಿ ಅತ್ತೆ ಎಲ್ಲರೂ ರಂಗು ಕುಂತರೂ.... ನಿಂತರೂ ಉಪಚಾರ ಮಾಡತೊಡಗಿದರು. ಮಂಜುಳ ಜೊತೆಗೆ ರಂಗಸ್ವಾಮಿ ಮದುವೆ ಎಂದು ಎರಡೂ ಮನೆಯ ಹಿರಿಯರು ನಿಶ್ಚಯಿಸಿಬಿಟ್ಟಿದ್ದರು. ರಂಗಸ್ವಾಮಿಯು ಆಗಾಗ್ಗೆ ಭಾವಿ ಪತ್ನಿಯ ಮನೆಗೆ ಬಂದು... ಹೋಗಿ ಮಾಡುತ್ತಿದ್ದನು.

ಆದರೆ ಈ ದಿನ ಅವನು ಒಂದು ಎಡವಟ್ಟು ಕೆಲಸ ಮಾಡಿಬಿಟ್ಟನು. ಮಂಜುಳನ್ನ ಪ್ರೀತಿಯಿಂದ ''ಮಂಜೂ... ಹೀಗೆ ಹೊರಗಡೆ ಎಲ್ಲಾದ್ರು ಸ್ವಲ್ಪ ಹೊತ್ತು ಹಾಗೆಯೆ ಸುತ್ತಾಡಿ ಬರೋಣ್ವಾ..?'' ಎಂದು ಪ್ರೀತಿಯ ಆಹ್ವಾನವಿತ್ತನು. ರಂಗುವಿನ ಆಹ್ವಾನಕ್ಕೆ ಮನೆ ಮಂದಿಯ ಕುಮ್ಮಕ್ಕು ಇತ್ತು. ಮಂಜುಳ ಭರ್ಜರಿ ಮೇಕಪ್‌ನೊಡನೆ ಮನೆ ಬಿಟ್ಟಳು. ಮನೆ ಮಂದಿಯೆಲ್ಲ ಭಾವಿ ಸತಿ-ಪತಿಗಳ ಏಕಸಾಮ್ಯ ಕಂಡು ಸಂತಸ ಪಡತೊಡಗಿದರು. ಆದರೆ ಇದೇ ಸಂತಸ... ಸಡಗರ... ಬಹಳ ದಿನ ಉಳಿಯಲಿಲ್ಲ. ಅದಕ್ಕೆ ಕಾರಣಕರ್ತರು ಯಾರು...? ಇದೊಂದು ಬಿಡಿಸಲಾರದ ಸಮಸ್ಯೆಯಾಯ್ತು ಎಲ್ಲರಿಗೂ! ಏನು ನಡೀತು ಅಂತ ನಿಮ್ಮ ಮುಂದೆಯು ತೆರೆದಿಡ್ತೀನಿ... ನೀವೇ ರೂಲಿಂಗ್ ಕೊಡಿ ಅದು ನಿಮಗೆ ಬಿಟ್ಟದ್ದು. ಏನು ನಡೀತು ಅಂತ ಹೇಳ್ಲಾ... ಹೇಳೇಬಿಡ್ತೀನಿ...!

ಮನೆ ಬಿಟ್ಟು ಶಹರಕ್ಕೆ ನಡೆದ ಮಂಜು, ರಂಗು ಹೋದದ್ದು ಒಂದು ಹೋಟಲಿನ ಒಳಗಡೆ. ಇಬ್ಬರು ಆರಾಮವಾಗಿ ಅಕ್ಕ ಪಕ್ಕ ಒಬ್ಬರನ್ನೊಬ್ಬರು ಅಂಟಿಕೊಂಡೆ ಕುಳಿತರು. ಹೋಟಲಿನ ಬೇರರ್ ಇವರನ್ನು ಕಂಡು ನಾಚುತ್ತ ''ಯೇನ್ ಬೇಕು ನಿಮ್ಗೆ?'' ಎಂದು ಯಾವುದೋ ಲೋಕದಲ್ಲಿದ್ದವರನ್ನು 'ಚಿಟಕೆ' ಹೊಡೆದು ಎಚ್ಚರಿಸಿ ಕೇಳಿದ. ರಸಭಂಗವಾದವರಂತೆ ತಡವರಿಸುತ್ತ.. 'ಎರಡು ಮಸಾಲೆ ದೋಸೆ...!'' ಎಂದು ಹೇಳಿ ಮತ್ತೆ ಮಂಜುಳಳ ಅಂದವನ್ನು ಸವಿಯುತ್ತ ಕುಳಿತನು. ಇಬ್ಬರ ಕಣ್ಣಿನ ನೋಟಗಳು ಸೇರಿದವು ಮೌನವೇ ಮಾತಾಯ್ತು! ಮಾತು ಮಾಯವಾಯ್ತು...! ಸ್ವಲ್ಪ ಹೊತ್ತಿನಲ್ಲಿ ಮತ್ತೆ ಬಂದ ಬೇರರ್ ಇವರ ಏಕಾಂಗಿತನಕ್ಕೆ ಧಕ್ಕೆ ತಂದು ''ಸಾರ್... ಒಂದು ದೋಸೆ ರೆಡಿ

ಇತ್ತು. ಯಾರೋ ಆರ್ಡರ್ ಕೊಟ್ಟು ಕ್ಯಾನ್ಸಲ್ ಮಾಡಿದ್ದರು... ತಗೊಳ್ಳಿ... ಇದನ್ನ ತಿಂತಾ ಇರಿ... ಇನ್ನೊಂದು ದೋಸೇನಾ... ಇನ್ನು ಸ್ವಲ್ಪ ಹೊತ್ತು ತಂದ್ಬಿಟ್ಟೆ...'' ಎಂದು ಹೇಳಿ ರಂಗಸ್ವಾಮಿಯ ಉತ್ತರಕ್ಕೂ ಕಾಯದೆ ಓಡಿದನು. ರಂಗಸ್ವಾಮಿ ಏನೋ ಹೇಳಲು ಹೋಗಿ ಹೇಳಲಾಗದೆ ತನ್ನೊಳಗೆ ತಾನೇ ಪೇಚಾಡಿಕೊಂಡನು. ಮಸಾಲೆ ದೋಸೆಯ ಪರಿಮಳ ಮೂಗಿಗೆ ಬಡಿಯತೊಡಗಿತು. ರಂಗುವಿನ ನಾಲಿಗೆಯಲ್ಲಿ ಪಳ್ಳನೆ ನೀರೊಡೆಯಿತು. ರಂಗು ತನಗರಿವಿಲ್ಲದಂತೆಯೆ ಮಸಾಲೆ ದೋಸೆಗೆ ಕೈ ಹಾಕಿ ಒಂದೊಂದೆ ಚೂರು ಹೆಕ್ಕಿ ಪಕ್ಕದಲ್ಲಿದ್ದ ಕಾಯಿ ಚಟ್ನಿಯಲ್ಲಿ ಅದ್ದಿ ಸವಿಯತೊಡಗಿದನು. ಅವನ ಕಣ್ನೋಟ ಕ್ರಮೇಣ ಮಂಜುವಿನ ಮಸ್ತಕದಿಂದ ಮಸಾಲೆ ದೋಸೆಗೆ ಕದಲಿತು.

ಮಂಜುವನ್ನು ಬಿಟ್ಟು ಮಸಾಲೆ ದೋಸೆಯ ಸ್ವಾಹದಲ್ಲಿ ತೊಡಗಿದ ರಂಗುವನ್ನು ಕಂಡ ಮಂಜು ಕುಪಿತಗೊಂಡಳು. ಮಂಜುವಿನ ಮುಖದಲ್ಲಿ ಲಾಸ್ಯವಾಡುತ್ತಿದ್ದ ಮುಗುಳ್ನಗು ಮಂದಹಾಸ ಮಾಯವಾಗಿ... ನಿಧಾನವಾಗಿ... ಅಸಮಧಾನ... ಆಕ್ರೋಶ... ಆವರಿಸಿಬಿಟ್ಟಿತು. ಅತ್ತ ಮುಖ ತಿರುಗಿಸಿ ಕುಳಿತಳು. ಅಷ್ಟರಲ್ಲಿ ಹೋಟೆಲ್ ಮಾಣಿ ಹಲ್ಲು ಗಿಂಜುತ್ತ... ಮತ್ತೊಂದು ಮಸಾಲೆ ದೋಸೆ ತಂದಿತ್ತನು. ರಂಗಸ್ವಾಮಿ ಪ್ರೀತಿ ಬೆರೆಸಿದ ಧ್ವನಿಯಲ್ಲಿ ''ಮಂಜೂ... ಮಸಾಲೆ...!'' ಎಂದನು. ಮಂಜುಳ ಮುಖದಲ್ಲಿ ರೌದ್ರತೆಯ ಮೋಡ ಸಂಪೂರ್ಣ ಆವರಿಸಿಬಿಟ್ಟಿತು. ರಂಗಸ್ವಾಮಿ ದೋಸೆಯ ತಟ್ಟೆಯನ್ನು ಮಂಜುಳಳ ಬಳಿಗೆ ಮತ್ತಷ್ಟು ಸರಿಸಿದನು. ಊಹುಂ... ಕುಪಿತಳಾದ ಮಂಜು ಮಸಾಲೆ ತಿನ್ನುವುದಿರಲಿ ಇತ್ತ ನೋಡಲೂ ನಿರಾಕರಿಸಿದಳು...

ರಂಗೂ... ''ಮಂಜು... ಮಂಜೂ...'' ಎನ್ನುತ್ತ ಅವಳ ಗಲ್ಲವನ್ನು ತನ್ನತ್ತ ತಿರುಗಿಸಿ ರಮಿಸಲು ಹೋದನು. ಎಲ್ಲವೂ ನೀರಿನಲ್ಲಿ ಹೋಮವಾದಂತಾಯಿತು. ರಂಗಸ್ವಾಮಿಯ ಕೈಯನ್ನು ಮಂಜು ರಬಸದಿಂದ ಕಿತ್ತೊಗೆದಳು. ಆಗ ಅವಳ ನಯನಗಳಿಂದ ಒಂದೆರಡು ಮುತ್ತಿನ ಹನಿಗಳು ಉದುರಿದವು. ರಂಗಸ್ವಾಮಿಗೆ ಮಂಜುವಿನ ಅಳುವಿಗೆ ಕಾರಣವೇನು ಎಂದು ಅರಿಯದೆ ಪರಿತಪಿಸಿದನು. ಮಂಜು... ಮೇಲೆದ್ದು ರಂಗುವಿನ ಬಳಿ ಒಂದು ಮಾತೂ ಕೂಡ ಆಡದೆಯೆ ಮನೆಯ ದಾರಿ ಹಿಡಿದಳು. ರಂಗಸ್ವಾಮಿ ಅರ್ಧ ತಿಂದ ಮಸಾಲೆಯನ್ನು ಬಿಟ್ಟು ಮಂಜು ಕೈ ಹಾಕದೆಯೆ ತಿರಸ್ಕರಿಸಿದ್ದ ಪೂರ್ತ ಮಸಾಲೆ ದೋಸೆಗೂ ಬಿಲ್ಲು ತೆತ್ತು ಹೋಟೆಲಿನಿಂದ ಹೊರನಡೆದು ಬಿರುಬಿರನೆ ನಡೆದು ಮಂಜುಳಳನ್ನು ಹಿಂಬಾಲಿಸಿದನು.

ಮಂಜುವಿನ ಮನೆಯಲ್ಲಿ ಅಂದು ದೊಡ್ಡ ರಾದ್ಧಾಂತವೇ ನಡೆದುಹೋಯಿತು. ಎಲ್ಲರೂ ''ಮಂಜುವಿಗೆ ಏನು ಹೇಳಿದೆ? ಏನು ಮಾಡಿದೆ...? ಮಂಜು ಯಾಕೆ ಹೀಗೆ ಅಳುತ್ತಿದ್ದಾಳೆ?'' ಎಂದು ತಲೆಗೊಂದು ಪ್ರಶ್ನೆಗಳನ್ನೇ ಸುರಿಸಿಬಿಟ್ಟರು. ಮಂಜು ಓಡಿಹೋಗಿ ಕೊಠಡಿಯ ಬಾಗಿಲು ಭದ್ರಪಡಿಸಿದವಳು ಎಷ್ಟು ಸಮಯವಾದರೂ ತೆಗೆಯಲೇ ಇಲ್ಲ. ನಂತರ ಒಂದೆರಡು ದಿನ ಕಳೆದಿರಬಹುದು ಮಂಜುವಿನ ಅಣ್ಣ ಅನಂತನಿಂದ ರಂಗುವಿಗೆ ಫೋನ್ ಬಂದಿತು ''ಮಿ|| ರಂಗಸ್ವಾಮಿ, ಈ ಮದುವೆ ನನ್ನ ತಂಗಿಗೆ ಇಷ್ಟ ಇಲ್ಲವಂತೆ, ಐಯಾಮ್ ವೆರಿ ಸಾರಿ...!'' ಎಂದಿತು ಅತ್ತ ಕಡೆ ಬಂದ ಧ್ವನಿ. ''ಅನಂತೂ... ದಯವಿಟ್ಟು ಫೋನ್ ಇಟ್ಟುಬಿಡಬೇಡ... ಕಾರಣ ಕೇಳಬೋದಾ...?' ಎಂದು ರಂಗು ಗದ್ಗಿತನಾಗಿ. ಮತ್ತೆ ಅತ್ತಕಡೆಯ ಧ್ವನಿ ಕುಂಯ್‌ಗುಟ್ಟಿತು. ''ಈಟ್ ಈಸ್ ವೆರಿ ಸಿಂಪಲ್... ಆವತ್ತು ನೀನು ನನ್ನ ತಂಗೀನ ಸುಮ್ಮನೆ ಕೂರಿಸಿ ನೀನು ಮಾತ್ರ ಮಸಾಲೆ ದೋಸೆನಾ 'ಗಬಗಬ' ತಿಂದ್ಯಂತೇ... ನನ್ನ ತಂಗಿ ಹೇಳಿದ್ಲು. ಅವರು ಈಗಲೇ ಹೀಗಾದ್ರೆ... ಅವರ ಜೊತೆ ಮುಂದೆ ಸಂಸಾರ ಮಾಡೋದು ಹೇಗೆ ಅಂದ್ಬಿಳ್ಟು. ಅದಕ್ಕೆ ಅವಳಿಗೆ ಈ ಮದುವೆ ಇಷ್ಟ ಇಲ್ಲ ಅಂದ್ಮೇಲೆ ನಾವು ತಾನೆ ಯೇನ್ ಮಾಡೋಕ್ ಸಾಧ್ಯ...?!'' ಎಂದು ಫೋನ್ ಕುಕ್ಕಿದನು ಅನಂತು. ರಂಗಸ್ವಾಮಿ ಕೇಳ್ತಾನೆ 'ತಪ್ಪು ಯಾರದು?' ಎಂದು! ನೀವೇನಂತೀರಿ?



ನಮ್ಮ್ ಮಂಜಣ್ಣೆರೋ ಚಿಕಾಗೋಗೆ ನೊಣವಿನಕೆರೇ ದಾಟಿ ಓಗ್ಬೇಕಾಗೈತತಮ್ಮೀ

ಬಿಟ್ಟೀ ಚಾಕರೀ

– ಎಂ.ಎನ್.ಕೆ.

''ಪುಗಸಟ್ಟೇ ಪುನುಗು'' ಅಂದರೆ ''ನಂಗೂ ಹಚ್ಚು, ನನ್ನ ಚಿಕ್ಕಪ್ಪನಿಗೂ ಹಚ್ಚು'' ಅನ್ನೋ ಜನ ನಾವು. ಸಿಹಿ ಕಬ್ಬು ಬಿಟ್ಟೀ ಸಿಕ್ಕಿದರೆ ಬುಡಮಟ್ಟ ಮೇಯೋರು. ಒಬ್ಬ ಶೂ ಅಂಗಡೀ ಮಾಲೀಕ, ವ್ಯಾಪಾರ ಇಲ್ಲದೇ ನೊಣಹೊಡೀತಿದ್ದ. ''ಒಂದು ಜೊತೆ ಶೂ ಕೊಂಡೋರಿಗೆ ಒಂದು ಫ್ರೀ ಗಿಫ್ಟ್'' ಅಂತ ಬೋರ್ಡ್ ಹಾಕಿದ. ಆ ''ಫ್ರೀ'' ಬೋರ್ಡ್ ನೋಡಿದ ತಕ್ಷಣ ನುಗ್ಗಿದರು ಜನ ನೊಣ ಮುತ್ತಿದ ಹಾಗೆ. ಗಿಫ್ಟ್‌ಗಳು ಸಾಲದೇ ಹೋಗಿ ಇಡೀ ಅಂಗಡೀನೇ ಲೂಟೀ ಮಾಡಿದರಂತೆ. ಹೀಗಿದೆ ಆ ''ಫ್ರೀ'' ಪದದ ಮಹಿಮೆ.

ಹಾಗೇನೇ ಯಾರಾದರೂ ಬಿಟ್ಟಿ ಚಾಕರೀ ಮಾಡೋರು ಸಿಕ್ಕಿದರೆ ಅವರ ಸೇವೆ ''ಸ್ವೀಕರಿಸಲು'' ನಾವು ಸದಾ ಸಿದ್ಧ. ಈ ಮೈಂಡ್ ಸೆಟ್ ನಿನ್ನೆ ಮೊನ್ನೇದಲ್ಲ. ನಮಗೆ ಪುರಾತನ ಕಾಲದಿಂದಲೂ ಇದು ರಕ್ತಗತವಾಗಿ ವಂಶಪಾರಂಪರ್ಯವಾಗಿ ಬಂದಿದೆ.

ನಮ್ಮ ಶ್ರೀಮದಾಂಜನೇಯಸ್ವಾಮಿ ಎಕ್ಸಾಂಪಲ್ ತೊಗೋಳೋಣ. ನಮ್ಮ ಹನುಮಂತ ಸಂಜೀವಿನೀ ಪರ್ವತವನ್ನು ಎರಡು ಸಲ ರಣ ಭೂಮಿಗೆ ತಂದನಂತೆ. ಒಂದನೆಯಬಾರಿ ಇಂದ್ರಜಿತುವಿನ ಸರ್ಪಾಸ್ತ್ರಕ್ಕೆ ಬಲಿಯಾಗಿ ರಾಮ ಲಕ್ಷ್ಮಣರು ಮೂರ್ಛೆ ಬಿದ್ದಾಗ. ಎರಡನೆಯದು ರಾವಣನ ಏಟಿಗೆ ಲಕ್ಷ್ಮಣ ಬಿದ್ದಾಗ. (ಆಧಾರ: ರತ್ನರ ವಿಚಾರ ರಶ್ಮಿ)

ನಮ್ಮ ಆಂಜನೇಯಸ್ವಾಮಿಯ ಈ ಸಾಹಸವನ್ನು ಎಲ್ಲರೂ ಹೊಗಳಿದ್ದೇ ಹೊಗಳಿದ್ದು. ಕೊಂಡಾಡಿದ್ದೇ ಕೊಂಡಾಡಿದ್ದು. ಅವನ ಬೆನ್ನು ಚಪ್ಪರಿಸಿದ್ದೇ ಚಪ್ಪರಿಸಿದ್ದು. ಆದರೆ ಒಬ್ಬರಾದರೂ ''ಇದು ಸರಿಯೇ? ನಮ್ಮ ವಜ್ರಾಂಗಿಗೆ, ಅಂಜನೀ ಕಂದನಿಗೆ, ಈ ರೀತಿ ಕಷ್ಟ ಯಾಕೆ ಕೊಡಬೇಕಿತ್ತು? ಇದು ಟೋಟಲೀ Unfair'' ಅಂತ ಅಂದ್ರ? ಉಹುಂ ಇಲ್ಲವೇ ಇಲ್ಲ.

ಪಾಪ ಆ ಪಾಟೀ ಭಾರಾ ಹೊತ್ತವನಿಗೆ, ಸಮುದ್ರ ಹಾರಿ ಬಂದವನಿಗೆ, ಆ ಬಡ ಬ್ರಹ್ಮಚಾರಿಗೆ ಯಾರಾದರೂ ಮೈದಡವಿ ಎಣ್ಣೆ ಸವರಿ ಅಭ್ಯಂಜನ ಮಾಡಿಸಿದರಾ? ಅದೂ ಇಲ್ಲ. ಸಮುದ್ರ ಹಾರ್ದಾಗ್ಲೂ ಇಲ್ಲ, ಬೆಟ್ಟ ಕಿತ್ತಾಗ್ಲೂ ಇಲ್ಲ, ರಾವಣನ ಕೈಲಿ ಯದ್ವಾತದ್ವಾ ತದುಕಿಸಿಕೊಂಡಾಗ್ಲೂ ಇಲ್ಲ.

ಸಂಜೀವಿನೀ ಪರ್ವತಕ್ಕೂ ಲಂಕೆಗೂ ಎರಡು ಸಾವಿರ ಮೈಲಿ ದೂರ. ಹನುಮ ಮೊದಲನೆ ಸಲ ತಂದಾಗ ಅಲ್ಲಿದ್ದ ಜಾಂಬುವಂತ ಮತ್ತು ಸುಷೇಣ "ಅದನ್ನ ಈಗಲೇ ವಾಪಸ್ ತಗೊಂಡು ಹೋಗಬೇಡ. ಯುದ್ಧ ಇನ್ನೂ ಮುಗಿದಿಲ್ಲ. ರಾಮ ರಾವಣರ ಕಾಳಗ ಮುಂದಿದೆ. ಆವಾಗ ಮತ್ತೆ ಇದರ ಸಹಾಯ ಬೇಕಾಗ್ಬೋದು. ಇಲ್ಲೆ ಹತ್ತಿರ ರಾವಣನಿಗೆ ಕಾಣದಂತೆ ಬಚ್ಚಿಟ್ಟಿರು. ಯುದ್ಧ ಮುಗಿದಮೇಲೆ ವಾಪಸ್ ಕೊಟ್ಟರಾಯಿತು" ಅನ್ನೋ ಮುಂದಾಲೋಚನೇನೇ ಬೇಡ್ವೇ ಅಲ್ಲಿರೋರ್ಗೆ?

ಅದೂ ಬೇಡ ಬಿಡಿ. ಮೊದಲಸಲ ನಮ್ಮ ವಜ್ರಾಂಗ ಇಡೀ ಪರ್ವತವನ್ನೇ ತಂದಿದ್ದು ಅವನಿಗೆ ಜಾಂಬುವಂತನಿಗೆ ಬೇಕಾದ ನಾಲ್ಕು ಮೂಲಿಕೆಗಳು ಆ ಬೆಟ್ಟದಲ್ಲಿ ಎಲ್ಲಿವೆ ಅನ್ನೋ ತಿಳುವಳಿಕೆ ಇಲ್ಲದ್ದರಿಂದ. ನಮ್ಮ ವೈದ್ಯ ವಾಚಸ್ಪತಿಗಳಾದ ಜಾಂಬುವಾನ್ ಹಾಗೂ ಸುಷೇಣರು ಹನುಮನಿಗೆ ಈ ಮಾಹಿತಿ ಕೊಟ್ಟಿದ್ದರೆ ಎರಡನೇ ಸಲ ಇಡೀ ಪರ್ವತವನ್ನೇ ತರೋ ಉಸಾಬರಿ ಇರುತ್ತಿರಲಿಲ್ಲ. ನನ್ನ ಡೌಟ್ ಏನೆಂದರೆ ಹನುಮನಿಗೆ ಈ ಮಾಹಿತಿ ಹೇಳಿಕೊಟ್ಟಿದ್ದರೆ ಮುಂದೆ ಅವನೇ ಮೂಲಿಕೆ ಎಕ್ಸ್ ಪರ್ಟ್ ಆಗಿ ಬಿಡುತ್ತಾನೆ. ನಮ್ಮ ಸೀಕ್ರೆಟ್ಸ್ ಲೀಕ್ ಆಗಿಬಿಡುತ್ತೆ. ಮುಂದಿನ ಯುದ್ಧಗಳಲ್ಲಿ ನಮಗೆ ಡಿಮಾಂಡೇ ಇರಲ್ಲಾ ಅನ್ನೋ ಮೈಂಡ್ ಸೆಟ್ ಇರಬಹುದಾಂತ ಈ ಮೂಲಿಕೇ Experts ಜಾಂಬುವಾನ್ ಮತ್ತು ಸುಷೇಣರ ಮನಸ್ಸಿನಲ್ಲಿ You cannot out right rule out this possibility.

ಒಟ್ನಲ್ಲಿ ಹೇಳೋದಾದ್ರೆ ನಮ್ಮ ವಾಯುಪುತ್ರನಿಗೆ ಈ ರೀತಿ ಉಪದ್ರ ಕೊಡಬಾರದಿತ್ತು ಆ ರಣರಂಗದ ಸೇನಾಪತಿಗಳು.

ಆ ಕಾಲಕ್ಕೆ ಅದು ಸರಿ ಹೋಯ್ತು. ಈ ಕಾಲದಲ್ಲಿ ಅದೆಲ್ಲಾ ನಡಿಯೋಲ್ಲ. ಈಗ ಅದೇ ಹನುಮಂತನಿಗೆ ಆ ಕೆಲಸ ಮಾಡೂಂತ ಹೇಳಿದ್ರೆ outright refuse ಮಾಡ್ತಾನೆ. ಇಲ್ಲಾ ನೀವು ಮೊದಲು ಮಾಡಿ ತೋರ್ಸಿ, ಆಮೇಲೆ ನನಗೆ ಹೇಳೀ ಅಂತಾನೂ ಅಂದಾನು.

ಈಗೆಲ್ಲಾ work smart - not work hard philosophy. ಕ್ಲೀನಾಗಿ ಬಟ್ಟೆ ಬರೆ ಹಾಕ್ಕೊಂಡು, ಮೇಲ್ ಮೇಲೆ ಕೆಲಸ ಮಾಡೋಥರ ತೋರಿಸ್ಕೊಂಡು ಮಧ್ಯೆ ಮಧ್ಯೆ ಜೋಕ್ಸ್ ಮಾಡ್ಕೊಂಡು ಟೈಂ ಪಾಸ್ ಮಾಡೋರ್ಗೆ ಬೆಟ್ಟ ಎತ್ತೋ ಕೆಲಸ ಹೇಳೋದೇ ಒಂದು ದೊಡ್ಡ ರಿಸ್ಕು. "ಇಂಥಾ ಡೇಂಜರಸ್ ಕೆಲಸ ಮಾಡೂಂತ

ನನಗೆ ಹೇಳಿದ್ರೂ'' ಅಂತ ಆ ನೌಕರ ಪೋಲೀಸ್ನೋ, ಹ್ಯೂಮನ್ ರೈಟ್ಸೋ, ಫ್ಯಾಕ್ಟರೀ ಇನ್ಸ್ಪೆಕ್ಟರ್‌ಗೋ ಇಲ್ಲಾ ಪೇಪರನೋರ್ಗೋ ತಿಳಿಸಿಬಿಟ್ರೆ ಅಲ್ಲಿಗೆ ಮುಗೀತೂ ಆ ಕೆಲಸ ಹೇಳಿದವನ ಗತಿ. ಅವನ್ನ ಅರೆಸ್ಟ್ ಮಾಡಿ ಜಾಮೀನೂ ಕೊಡದೆ ಜೈಲ್ಗೆ ಕಳಿಸಲೂ ಬಹುದು.

ನಮ್ಮ ಸರ್ಕಾರೀ ಸ್ವಾಮ್ಯದ ಆಫೀಸುಗಳಲ್ಲಿ ಆ ಫೈಲ್ ಇಲ್ಲಿಟ್ಟು, ಈ ಫೈಲ್ ಅಲ್ಲಿಟ್ಟು ದಿನವೆಲ್ಲಾ ಕಾಲಾಕಳೆದು, ಯಾರಾದರೂ ಬಂದು ''ನನ್ನ ಫೈಲ್ ಏನಾಯಿತೂ'' ಅಂತ ಕೇಳಿದ್ರೆ ''ನಮಗೆ ಇನ್ನೂ extra hands sanction ಆಗಿಲ್ಲ. ಮುಂದಿನ ತಿಂಗಳು ಬನ್ನಿ'' ಅಂತ ಹೇಳಿಕೊಂಡು ಓಡಾಡೋರ್ಗೆ ಕಾಲ.

''ಓಹೋ ಆ ಬೆಟ್ಟ ಕಿತ್ತು ಇಲ್ಲಿಗೆ ತರಬೇಕಾ. ಓಕೇ. ಮೊದಲು ಆ ಬೆಟ್ಟಾ ಕಿತ್ತು ನನ್ನ ತಲೇಮೇಲಿಡು. ಆಮೇಲೆ ನಾನು ಅದನ್ನ ಲಂಕೇಗೆ ಯಾಕೆ, ಟಿಂಬಕ್ಟೂಗೇ ತೊಗೊಂಡು ಹೋಗ್ತೀನೀ'' ಅಂತಾನೆ ಇಂದಿನ ಸೂಪರ್ ಸ್ಮಾರ್ಟ್ over empowered employee.

ಹನುಮಂತನಂತೋರು ಈಗಲೂ ಇದ್ದಾರೆ, ಲಕ್ಷಕ್ಕೆ ಒಬ್ಬರೋ ಇಬ್ಬರೋ. ಆದರೆ ಅವರನ್ನು ಕೆಲಸ ಮಾಡಲು ಬಿಡುವುದಿಲ್ಲ ಅವರ ಕಲೀಗ್ಸ್. 'ಲೋ ಕಾಕಾಪುಡಿ. ನೀನೇನೋ ಆ ಕೆಲಸಮಾಡಿ ಸ್ಪೆಷಲ್ ಬೋನಸ್ ಇಲ್ಲಾ ಪ್ರಮೋಶನ್ ಗಿಟ್ಟಿಸ್ತೀಯಾ. ಆ ಮೇಲೆ ಈ ಯಜಮಾನ ನಮ್ಮನ್ನೆಲ್ಲಾ ಹಾಗೇ ಮಾಡೀಂತ ಸತಾಯಿಸ್ತಾನೆ. ನೀನು ಬಾಯಿಮುಚ್ಚಿಕೊಂಡಿರ್ತೀಯಾ ಇಲ್ಲ ಹೊರಗಡೆ ನೋಡಿಕೊಳ್ಳೋಣ್ವಾ'' ಅಂತ ಕೇಳ್ದಾಗಾ ಇನ್ನೇನ್ಮಾಡೋದು. ಸುಮ್ಮನಿರಲೇಬೇಕು, ಬಾಲಾ ಮುದುರಿಕೊಂಡು.


ಅದಕ್ಕೇ ಅಲ್ವಾ ಈ ಕಾಲದಲ್ಲಿ ಈ ಪಾಟೀ ಅಡ್ವೈಸರ್ಸ್, ಕನ್ಸಲ್ಟೆಂಟ್ಸ್ ಅಲಿಯಾಸ್ ಸಲಹೆಗಾರರು ಹುಟ್ಟಿಕೊಂಡಿರೋದು?

ಈ ಸಲಹೆಗಾರರ ಕೆಲಸ ಬೇರೆಯವರು ತಮ್ಮ ಕೆಲಸವನ್ನು ಹೇಗೆ ಸ್ಮಾರ್ಟ್ ಆಗಿ ಮಾಡಬಹುದೂಂತ ಹೇಳೋದು. ಮಾಡಿ ತೋರ್ಸೋದಲ್ಲ. ಕೆಲಸ ನೆಟ್ಟಗಾದರೆ ''ನೋಡ್ದ್ಯಾ, ನನ್ನ ಅಡ್ವೈಸ್ ಹೇಗಿತ್ತೂ'' ಅಂತ ತನ್ನ ಮೀಸೇ ತಿರುವಿ ಆ ಸಬ್ಜೆಕ್ಟ್ ''ಕೇಸ್ ಸ್ಟಡೀ'' ಮೇಲೆ ಒಂದು ಪೇಪರ್ ಪಬ್ಲಿಷ್ ಮಾಡೋದು. ಕೆಲಸ ಸೊಟ್ಟಗಾದರೆ 'ರೀ, ನೀವು ನಾನು ಹೇಳಿದಹಾಗೆ ಮಾಡಲಿಲ್ಲ. ಅದಕ್ಕೇ ಹೀಗಾಯ್ತು'' ಅಂತ ನುಣಿಚಿಕೊಂಡು ""Why mid managers fail" ಅಂತ ಇನ್ನೊಂದು ಪ್ರಬಂಧ ಬರಿದು ಪಬ್ಲಿಷ್ ಮಾಡಿ ಫೀ ಜೇಬಿಗೆ ಹಾಕಿಕೊಳ್ಳೋದು.

ನನ್ನ ಪ್ರಕಾರ ಶ್ರೀ ರಾಮಚಂದ್ರ ಪ್ರಭು ರಣಭೂಮಿಗೆ ಒಂದಿಬ್ಬರು ಕನ್ಸಲ್ಟೆಂಟ್ಸ್ ಕರ್ಕೊಂಡು ಹೋಗ್ಬೇಕಿತ್ತು. ಅವರು ಈ ರೀತಿ ಡಬ್ಬಲ್ ಬೆಟ್ಟ ತರೋ ಕೆಲಸ. ಅವಾಯ್ಡ್ ಮಾಡ್ತಿದ್ರೋ ಏನೋ. ಇಲ್ಲಾ ಇಬ್ಬರೂ ಡೈವರ್ಜೆಂಟ್ opinions ಕೊಟ್ಟು ಇನ್ನೂ ಜಾಸ್ತೀ confusion ಕ್ರಿಯೇಟ್ ಮಾಡ್ತಿದ್ರೋ ಏನೋ.

ಈ ಇಬ್ಬರ ಮಧ್ಯೆ ಸಿಕ್ಕಿಹಾಕಿಕೊಂಡು ನಮ್ಮ ಹನುಮ ಮುನಿಸಿಕೊಂಡು ಆ ಬೆಟ್ಟಾನ ಅಲ್ಲೆ ಸಮುದ್ರಕ್ಕೆ ಬಿಸಾಕಿ ಧಿಂರಂಗಾಂತ ಅಲ್ಲೇ ಸಮುದ್ರದ ದಂಡೇ ಮೇಲೆ ಕೂತಿರ್ತಿದ್ದನೋ ಏನೋ. ಆ ಸೀತಾಪತಿ, ರಮಾರಮಣ ಗೋವಿಂದಾ, ಅಯೋಧ್ಯಾನಾಥಾ ಶ್ರೀ ರಾಮಚಂದ್ರ ಪ್ರಭೂನೇ ಬಲ್ಲ.




ಬಿ.ಜೆ.ಪಿ. ಮತ್ತು ಕಾಂಗ್ರೆಸ್‌ನಿಂದ ಸಮಾನ ದೂರ..!?
- ದೇವೇಗೌಡ
ನವದೆಹಲಿ
ಬೆಂಗಳೂರು
ಹರದನಹಳ್ಳಿ

ಭಾರುಡ ವೈಭವಂ

- ಶೋಭಾ ಪ್ರಮೋದ್

ಕರ್ನಾಟಕದಲ್ಲಿ 'ಯಕ್ಷಗಾನ'ವಿದ್ದಂತೆ, ಮಹಾರಾಷ್ಟ್ರದಲ್ಲಿ 'ಭಾರುಡ' ಎಂಬ ಹೆಸರಿನ ಜಾನಪದ ಕಲೆ ಪ್ರಸಿದ್ಧವಾಗಿದೆ. ಅದಕ್ಕಾಗಿ ನಮ್ಮೂರಿನ ಚಿಲ್ಲಿ-ಪಿಲ್ಲಿ ಪುಟಾಣಿಗಳೆಲ್ಲ ಕೂಡಿ, ದಸರೆಯ ದಿನಗಳಲ್ಲಿ ಬಯಲನ್ನು ಚೊಕ್ಕಟಗೊಳಿಸಿದರು. 'ಟೆಂಟ್' ಒಂದನ್ನು ಕಟ್ಟಲಾಯಿತು. ಸರಸ್ವತಿ ದೇವಿಯ ಮೂರ್ತಿಯನ್ನು ಸ್ಥಾಪಿಸಿ, ''ದುರ್ಗೇ ದುರ್ಗಟ ಭಾರೀ''... ಎಂದು ಕಲ್ಯಾಣೀ ರಾಗದಲ್ಲಿ, ಹೆಚ್ಚು ಕಮ್ಮಿ ಕಿರುಚಾಡಿದಂತೆ ಭಜನೆ ಮಾಡಿ ಪಾವನರಾದರು!

ಉದ್ಘಾಟನೆ ಮಾಡಲು, ನಮ್ಮೂರಿನ ಪಂಚಾಯತಿ ಸದಸ್ಯರಾದ, ದುರ್ಗಪ್ಪನವರನ್ನು ಕರೆಸಲಾಯಿತು. ಕೇವಲ ಹಣ ಬಲದಿಂದ, ಚುನಾವಣೆಯಲ್ಲಿ ಮೂರುಸಲ ಗೆದ್ದು ಬಂದ ಅವರಿಗೆ, ಮೈಕಿನ ಮುಂದೆ ಮೂರು ಅಕ್ಷರಗಳನ್ನಾಡುವ ಧೈರ್ಯವಿರದೆ, ಕುಳಿತವರೆಲ್ಲರೂ 'ಏನಾದ್ರೂ ಮಾತಾಡಿ ಸಾರ್!'' ಎಂದು ಕೂಗಲಾರಂಭಿಸಿದರು!! ಆಗ ದುರ್ಗಪ್ಪನವರು, ಎಡ-ಬಲ, ಮೇಲೆ-ಕೆಳಗೆ, ಪೂರ್ವ-ಪಶ್ಚಿಮ... ಎಲ್ಲ ಕಡೆಗೂ ನೋಡಿ ಸುಸ್ತಾದಾಗ ''ಇನ್ನೊಮ್ಮೆ ಮಾತನಾಡಬಹುದು ಸಾರ್! ಈ ಸಲ ಕುಳಿತುಕೊಳ್ಳಿ'' ಎಂದು ಬಳಿಯಲ್ಲಿ ಕುಳಿತವರು ಕೈಹಿಡಿದು ಕುಳ್ಳಿರಿಸಿದರು!

'ಭಾರುಡ' ವಿಷಯ ''ದ್ರೌಪದೀ ವಸ್ತ್ರಾಹರಣ'' ವಾಗಿದ್ದು, ದ್ರೌಪದೀ ಪಾತ್ರ ಮಾಡಿದವನು ಗೋವುಗಳನ್ನು ಕಾಯುವ ನಾಗಪ್ಪನಾಗಿದ್ದ! ''ದನಾ ಕಾಯೋದು ಬಿಟ್ಟು ಇವನ್ಯಾವಾಗ ಪಂಚಪತಿಯರ ಸತಿಯಾದನು'' ಎಂದು ತಿಳಿದವರು ಪಿಸಿ - ಪಿಸಿ ನುಡಿದಾಗ, ಅವನ ಹೆಂಡ್ತಿ ನಾಗಮ್ಮ ನಾಚಿಕೆಯಿಂದ ಮುದ್ದೆಯಾಗಿ, ಸೀರೆಯ ಸೆರಗಿನಿಂದ ಮುಖ ಒರೆಸಿಕೊಂಡಳು!

ಸಭೆಯಲ್ಲಿ, ಭೀಷ್ಮ-ವಿದುರಾದಿ ಹಿರಿಯರ ಸಮ್ಮುಖದಲ್ಲಿ, ಧೃತರಾಷ್ಟ್ರನ ಉಪಸ್ಥಿತಿಯಲ್ಲಿ ದುಶ್ಯಾಸನನು, ದ್ರೌಪದಿಯ ಸೀರೆಯನ್ನು ಎಳೆಯುತ್ತಿದ್ದಾನೆ! ಒಂದು ಸೀರೆಯಾಯಿತು, ಎರಡಾಯಿತು ಮೂರಾಯಿತು, ನಾಲ್ಕನೆಯ ಸೀರೆಯನ್ನು ಎಳೆಯುವ ರಭಸದಲ್ಲಿ, ''ಅಯ್ಯಯ್ಯೋ ಇದೇ ಕೊನೆಯ ಸೀರೆ ಮಾರಾಯಾ! ಬೇಡ... ಬೇಡ''... ಎಂದು ಆ ಬಡಪಾಯಿ ದ್ರೌಪದಿ, ಕೃಷ್ಣನಿಗೆ ಮೊರೆ ಹೋಗುವ ಬದಲು, ದುಶ್ಯಾಸನನಿಗೇ ನಮಸ್ಕರಿಸಿದಳು! ಆದರೂ ಆತ ಕೇಳಲಿಲ್ಲ! ಒಳಗೆ ಸೇರಿದ್ದ ''ಗುಂಡಿನ'' ಅಮಲಿನಲ್ಲಿ ಸೀರೆಯನ್ನು ಎಳೆದಾಗ, ದ್ರೌಪದಿಯ ಚಡ್ಡಿ ಮಾತ್ರ ದರ್ಶನವಾಗಿ ಸಭಿಕರು ''ಹೊSSS'' ಎಂದು ನಗತೊಡಗಿದರು! ''ಈ ಭಾರುಡ ಆಟ ಮುಗಿಯಲಿ. ಬಡ್ಡಿ ಮಗನೇ ನಂತರ ನಿನ್ನನ್ನು ವಿಚಾರಿಸಿಕೊಳ್ತೇನೆ''! ಎಂದು ದ್ರೌಪದಿ ಅಪಮಾನದಿಂದ

ಅವ್ರುಡುಗಚ್ಚಿದಳು! ಮೈಕಿನಲ್ಲಿ, ಅದೂ ಎಲ್ಲರಿಗೂ ಕೇಳಿಸುವಂತಾಯಿತು. ದ್ರೌಪದಿ ಪಾತ್ರವನ್ನು ಮಾಡುವ ನಾಗಪ್ಪ ಮೂರು ದಿನಗಳ ಹಿಂದೆ ದಾಡಿ ತೆಗೆಸಿಕೊಂಡಿದ್ದನೆಂದು ಕಾಣುತ್ತದೆ. ಗುಲಾಬಿ ಬಣ್ಣವನ್ನು ಮುಖ-ಕೆನ್ನೆಗಳಿಗೆಲ್ಲ, ಢಾಳಾಗಿ ಬಳಿದುಕೊಂಡರೂ ಕೂಡ ಶ್ರಾವಣ ಮಾಸದಲ್ಲಿ ಬೆಳೆಯುವ ಪೈರಿನಂತೆ, ದಾಡಿ ಕಂಗೊಳಿಸುತ್ತಿತ್ತು! ಕಾಲೇಜು ಕನ್ಯೆಯರು ''ಇಲ್ಲಿ ನೋಡ್ರೇ, ಕಲಿಯುಗದಲ್ಲಿ ದ್ರೌಪದಿಗೂ ಪತಿವ್ರತಾಧರ್ಮವನ್ನು ಆಚರಿಸಿ, ಆಚರಿಸಿ, ದಾಡಿ-ಮೀಸೆಗಳೂ ಚಿಗುರಲಾರಂಭಿಸಿವೆ!'' ಎಂದು ವಕ್ರೋಕ್ತಿ ವಿಮರ್ಶೆಯನ್ನು ಮಾಡಲಾರಂಭಿಸಿದರು.

''ಕೀಚಕವಧೆಯ ಪ್ರಸಂಗ'' ಮುಂದಿನದು. ಸೈರಂದ್ರಿಯ ಪಾತ್ರವನ್ನು ಮಾಡಿದ ಮಾರುತಿ ಒಳಲಂಗ ದೊರೆಯದೆ, ಕೇವಲ ಚಡ್ಡಿಯ ಮೇಲೆ ಸೀರೆಯನ್ನು ಸುತ್ತಿ, ರಂಗಮಂಚಕ್ಕೆ ಆಗಮಿಸಿದ್ದನು. ಅವರಿವರಿಂದ ಎರವಲು ತಂದಿದ್ದ ರವಿಕೆ ಕೂಡ ಸಡಿಲಾಗಿ, ಬೆದರುಗೊಂಬೆಗೆ ರವಿಕೆ ಹಾಕಿದಂತೆ ಆಗಿತ್ತು! ಕೀಚಕನ ಪಾತ್ರ ಮಾಡಿದವನು, ಆಚೆ ಮನೆಯ ಮಂಗೇಶನಾಗಿದ್ದ. ಭೀಮನ ಪಾತ್ರದಲ್ಲಿರುವ, ನರಸಿಂಹನಿಗೂ, ಮಂಗೇಶನಿಗೂ ಮನೆಯ ಬೇಲಿಯನ್ನು ಹಾಕುವ ವಿಷಯದಲ್ಲಿ ಹಿಂದೆ ವಾದವಾಗಿತ್ತು. ಆ ಸಂಧಿಯನ್ನು ಬಿಡುವಷ್ಟು ಮೂರ್ಖನೇ ಈ ನಮ್ಮ ಭೀಮರಾಯ! ಕೀಚಕನನ್ನು ಕೊಲ್ಲುವ ಸಂದರ್ಭದಲ್ಲಿ, ಆತನನ್ನು ಕೆಳಗೆ ಉರುಳಿಸಿ, ಹೊಟ್ಟೆಯ ಮೇಲೆ ಕುಳಿತುಕೊಂಡು, ಮುಖ-ಮೂಲೆಯನ್ನು ನೋಡದೆ, ಗುದ್ದಿ, ಬಾಯಿಯಿಂದ ರಕ್ತ ತೆಗೆದೇ ಬಿಟ್ಟ! ''ಅಯ್ಯಯ್ಯೋ ಸತ್ತೆ - ಯಾರಾದ್ರೂ ಜೀವ ಉಳಿಸ್ರೀ. ನಿಜವಾಗಿಯೂ ಈತ ನನ್ನನ್ನು ಸಾಯಿಸುತ್ತಿದ್ದಾನೆ'' - ಎಂದು ಕೀಚಕ ಕಿರುಚಾಡಿದಾಗ, ಎಲ್ಲರೂ ಆತನ ನೈಜ ಅಭಿನಯಕ್ಕೆ ತಲೆದೂಗಿದರು! ಆದರೆ ಆತನ ಪತ್ನಿ ರಾಧಾ, ರಂಗದ ಮೇಲೆಯೇ ಬಂದು, ಎಲ್ಲಿಯೋ ಬಿದ್ದ ಕಸಬರಿಕೆಯಿಂದ ಭೀಮನನ್ನು ಹೊಡೆಯತೊಡಗಿ ''ಬೋ... ಮಗನೇ, ನಿನ್ನ ಮನೆ - ವಂಶ ಹಾಳಾಗ! ನಿಜವಾಗಿಯೂ ನನ್ನ ಗಂಡನನ್ನು ಕೊಲ್ಲುತ್ತೀಯಾ? ನಾನಿಲ್ಲವೇ ಅವನ ಪತ್ನಿ?! ನಿನ್ನ ಕೈಗೆ ಹಾಗೂ ಹೊಟ್ಟೆಗೆ ಹುಳ ಬಿದ್ದು ನೀನು ಸತ್ತು ಹೋಗು...'' ಎಂದೆಲ್ಲ ಬಯ್ಗುಳ ಸರಿಮಳೆಯನ್ನೇ ಸುರಿಸಿ ಹೊಡೆಯತೊಡಗಿದಾಗ, ಭೀಮ ರಂಗದಿಂದ ಹಾರಿ, ಸಭಿಕರನ್ನೂ ದೂಡಿ, ದೂರ ಓಡಿಹೋದನು.

ಹೀಗೆ... ನಮ್ಮೂರಿನ ಭಾರುಡ ಪ್ರಸಂಗ ಅಲ್ಲಿಗೆ ಮುಗಿಯಿತು. ಮಹಾಭಾರತದ ಕಥೆಯೇ ಒಂದಾದರೆ, ನಮ್ಮ ಭಾರುಡದ ಕಥೆಯೇ ಬೇರೆಯಾಯಿತೆಂದು ನೆನೆಸಿ ಊರಿನವರು ಮುಸಿಮುಸಿ ನಗುತ್ತಾರೆ!

ಅದೇ ಮೊದಲು. ಅದೇ ಕೊನೆ! ಅಂದಿನಿಂದ ದಸರಾ ಹಬ್ಬದಲ್ಲಿ ಕೋಲಾಟ ಮಾತ್ರ ಇರುತ್ತದೆ. ಹೊರತು ''ಭಾರುಡ''ವನ್ನಾಡಲು ಯಾರೂ ಸುದ್ದಿ ಎತ್ತುವುದೇ ಇಲ್ಲ!

ಬಸ್ ಪ್ರಯಾಣವೂ... ನಿದ್ರಾ ಪುರಾಣವೂ...

– ಡಾ|| ಹೆಚ್. ಎಸ್. ವೆಂಕಟೇಶ್

ಇದೇನಿದು ಅಲ್ಪ ವಿಷಯವೆಂದು ನಗಬೇಡಿ. ಇಡೀ ಐದಾರು ವರ್ಷ ಇದರ ಬಗ್ಗೆ ದೀರ್ಘವಾಗಿ ಚಿಂತಿಸಿ, ಮಂಥಿಸಿ, ಅನುಮಾನ ಬಂದ ಕಡೆ ಗ್ರಂಥಗಳನ್ನು ಅವಲೋಕಿಸಿಯೇ ಇದನ್ನು ಬರೆದದ್ದು. ಆದ್ದರಿಂದಲೇ ನಿದ್ರಾಪುರಾಣವೆಂದು ಹೆಸರು, ಅರ್ಥವಾಯಿತೆ.

''ಹೆಣ್ಣನ್ನು ಬೇಡವೆಂದ ಅಯ್ಯಗಳಾರು?'' ಎಂದು ಒಬ್ಬ ಕವಿಯತ್ರಿ ಹೇಳಿದುದನ್ನು ಕೇಳಿರಬಹುದು. ''ಬಸ್ಸಿನಲ್ಲಿ ತೂಕಡಿಸದ ಅಯ್ಯಗಳಾರು?'' ಎಂದು ನಾನು ಹೇಳುವುದನ್ನೂ ಕೇಳಿ. ನಮ್ಮೆಲ್ಲರ ಸಾಮಾನ್ಯ ಪ್ರಯಾಣ ವಾಹನ ಬಸ್ಸಲ್ಲವೇ? ಅದು ಒಂದೆರಡು ಗಂಟೆಗಳದ್ದಿರಬಹುದು, ಹಲವಾರು ಗಂಟೆಗಳದ್ದಿರಬಹುದು. ಒಟ್ಟಿನಲ್ಲಿ ನಿದ್ರಾವಶವಾಗದ ಪ್ರಯಾಣಿಕರು ಯಾರಾದರೂ ಇದ್ದರೆ ಅವರು ''ಬಿಡುಗಣ್ಣರೇ'' ಸೈ.

ಬಸ್ ಪ್ರಯಾಣಿಕರಲ್ಲಿ ನಾಲ್ಕು ವಿಧವೆಂದು ನನ್ನ ಸಂಶೋಧನೆ. ದರಕ್ಕೆ ತಕ್ಕಂತೆ ಬರುವ ಸೂಪರ್ ಡೀಲಕ್ಸ್, ಡೀಲಕ್ಸ್, ಆರ್ಡಿನರಿ ಇತ್ಯಾದಿಗಳಲ್ಲಿ ಇವು. ಇದರ ವರ್ಗೀಕರಣದ ನನ್ನ ಸಂಶೋಧನೆಯನ್ನು ಕೇಳಿ.

ಮೊದಲನೆಯದು - ಆಹಾ, ಓಹೋ ವಿಭಾಗ

ಎರಡನೆಯದು - ಕುಲು, ಕುಲು ವಿಭಾಗ

ಮೂರನೆಯದು - ಧನುರ್ವಾಯು ವಿಭಾಗ

ನಾಲ್ಕನೆಯದು - ಬಾವಲಿ ಅಥವಾ ಬ್ಯಾಟ್‌ಮ್ಯಾನ್ ವಿಭಾಗ

ನೀವು ಯಾವುದೇ ಬಸ್ಸನ್ನು ತಂದು ಮುಂದೆ ನಿಲ್ಲಿಸಿದರೂ, ಈ ನಾಲ್ಕೂ ವಿಭಾಗಗಳನ್ನು ತೋರಿಸಬಲ್ಲೆನೆಂಬ ವಿಶ್ವಾಸ, ಧೈರ್ಯ ನನಗಿದೆ. ನಿಮ್ಮ ಅನುಭವವನ್ನು, ನೆನಪನ್ನು ಧೂಳು ಕೊಡವಲು, ಅದರ ಬಗ್ಗೆ ವಿವರಣೆ ಕೊಡುತ್ತೇನೆ ಕೇಳಿ, ಆದರೆ ಒಂದು ಮಾತನ್ನು ನೆನಪಿನಲ್ಲಿಡಿ. ಇದು ಆಯಾ ವಿಭಾಗದಲ್ಲಿ ಕೂತು, ಅರೆ ನಿದ್ರೆಯೋ, ಗಾಢನಿದ್ರೆಯೇ, ಕಣ್ಣು ಮುಚ್ಚಿ ಚಿಂತನೆಯೋ, ಮಂಥನವೋ? ಮಾಡುತ್ತಿರುವವರಿಗೆ ಮಾತ್ರ ಅನ್ವಯಿಸುತ್ತದೆ. ಇಲ್ಲದಿದ್ದರೆ ಅನ್ವಯಿಸಿಕೊಳ್ಳಿ. ಬಿಡುಗಣ್ಣರ ವಿಚಾರ, ಸಹವಾಸ ನಮಗ್ಯಾಕೆ ನಾವು ನಿದ್ರಾಪ್ರಿಯರಲ್ಲವೇ?

ಮೊದಲನೇ ವಿಭಾಗ - ಆಹಾ ಓಹೋ ವಿಭಾಗವಲ್ಲವೇ? ಇದು ಅಂದಾಜು. ಚಾಲಕನಿಂದ ಹಿಡಿದು ಮೂರ್‍ನಾಕು ಸಾಲಿನ ಸೀಟಿನ ವರೆಗೂ ಎಂದಿಟ್ಟುಕೊಳ್ಳಿ, ಬಸ್ಸು ಓಡುತ್ತಿರುವಾಗ ಅದರ ಕುಲುಕಾಟ ಹೆಚ್ಚು ಅನುಭವಿಸದವರು ಇವರು. ಕೇವಲ ತಲೆ ಬುರುಡೆ ಮಾತ್ರ ಎಡ, ಬಲ, ಹಿಂದೆ ಮುಂದೆ ಅಲುಗಾಡುತ್ತಿರುತ್ತದೆ. ದೇಹದ ಇನ್ಯಾವ ಭಾಗವೂ ಅಷ್ಟು ಅಲುಗುವುದಿಲ್ಲ. ಕಣ್ಣುಮುಚ್ಚಿ ಯೋಚಿಸಿ. ಯಾವುದೋ ಸುಮಧುರವಾದ ಸಂಗೀತ ಕೇಳುತ್ತಾ, ಸಂಗೀತ ಕಛೇರಿಯಲ್ಲಿ ಗಾಯಕನ ಪ್ರೌಢಿಮೆ ಅನುಭವಿಸುತ್ತಾ, ತನ್ಮಯರಾಗಿ ಆನಂದಿಸುತ್ತಾ ತಲೆ ಹಾಕುವ ಜನರಂತೆ ಭಾಸವಾಗುತ್ತದಲ್ಲವೇ? ಮಧ್ಯೆ ಮಧ್ಯೆ ಸರಿಯಾಗಿ ಕೂತು ಸಂಗೀತದ ಸುಧೆಗೆ ''ಆಹಾ, ಓಹೋ'' ಎಂದು ಮೆಚ್ಚಿಗೆ ಸೂಚಿಸುವಂತಿರುತ್ತದೆ. ಆದ್ದರಿಂದ ಇದು 'ಆಹಾ, ಓಹೋ' ವಿಭಾಗ.

ಎರಡನೆಯದು - ''ಕುಲು ಕುಲು'' ವಿಭಾಗ. ಸಾಮಾನ್ಯವಾಗಿ ಇದನ್ನು ಬಸ್ಸಿನ ಮಧ್ಯಭಾಗವೆಂದಿಟ್ಟುಕೊಳ್ಳಿ. ಅಂದರೆ ಹಿಂದಿನ ಚಕ್ರದಿಂದ ಮುಂದಿನ ಭಾಗ. ಇಲ್ಲಿ ಕುಲುಕಾಟ ಹೇಗಿರುತ್ತದೆಂದರೆ, ಇಡೀ ದೇಹ ಸಣ್ಣಗೆ ಅಲುಗಾಡುತ್ತಿರುತ್ತದೆ. ಅಂದರೆ ಯಾವುದಾದರೂ ಹಾಸ್ಯ, ತಮಾಷೆ ಕೇಳಿದಾಗ ನಾವು ನೀವು ''ಕುಲು ಕುಲು'' ನಗುತ್ತಾ ದೇಹ ಅಲುಗಾಡಿಸುವುದಿಲ್ಲವೇ? ಹಾಗೆಯೇ ಕಾಣುತ್ತದೆ. ಆದ್ದರಿಂದ ಮಧ್ಯದ ಭಾಗ ''ಕುಲು ಕುಲು'' ವಿಭಾಗವೆಂದಾಯ್ತು.

ಮೂರನೆಯದು - ''ಧನುರ್ವಾಯು'' ವಿಭಾಗ. ಅದೇ ಹಿಂದಿನದು. ಇಲ್ಲಿ ಕುಳಿತವರ ಪಾಡು ದೇವರೇಗತಿ. ಇಡೀ ಬಸ್ಸು ಗಡಗಡ ನಡುಗುತ್ತಿರುವಂತೆ ಭಾಸವಾಗುತ್ತದೆ. ಕೂತಲ್ಲಿ ಕೂರದೆ, ಸೀಟಿನಿಂದ - ಟಾಪಿಗೆ, ಹಿಂದಿನಿಂದ ಮುಂದಕ್ಕೆ, ಎಡಬಲಕ್ಕೆ ದೇಹ ಎಗರೆಗರಿ ಬೀಳುತ್ತಿರುತ್ತದೆ ದೇಹ. ಧನುರ್ವಾಯು ಬಂದಂತೆ. ಡ್ರೈವರು ಮಾಡುವ ಪ್ರತಿಯೊಂದು ಕುಚೋದ್ಯವೂ ಕಾಣಿಸಿಕೊಳ್ಳುವುದು ಈ ಭಾಗದಲ್ಲೇ, ತಕ್ಷಣ ಬ್ರೇಕು ಹಾಕುವುದು ಹಿಂದೆ ಮುಂದೆ ಜರ್ಕು ಕೊಡುವುದು, ತಿರುವಿನಲ್ಲಿ-ವೇಗವಾಗಿ ತಿರುಗಿಸುವುದು ಎಲ್ಲಕ್ಕೂ ನೇರ ಷೇರುದಾರರು ಇವರೇ. ದೇಹದ ಒಂದೊಂದು ಭಾಗವೂ ದಿಕ್ಕಾಪಾಲಾಗುವುದು ಈ ವಿಭಾಗದಲ್ಲೇ. ಆದ್ದರಿಂದ ಇದನ್ನು ''ಧನುರ್ವಾಯು'' ವಿಭಾಗವೆಂದು ಕರೆಯೋಣ.

ಕೊನೆಯದು - ಬಾವಲಿ ಅಥವಾ ಬ್ಯಾಟ್‌ಮ್ಯಾನ್ ವಿಭಾಗ ಅಥವಾ ಶುದ್ಧಗನ್ನಡದಲ್ಲಿ ಹೇಳುವುದಾದರೆ ''ನೇತಾಡುವ ವಿಭಾಗ'' ಬಸ್ಸಿನಲ್ಲಿ ನಿಂತು, ಟಾಪಿನಲ್ಲಿರುವ ಕಂಬಿ ಹಿಡಿದು, ಅರ್ಧ ನಿದ್ರೆಯಲ್ಲಿ ಅತ್ತಿಂದಿತ್ತ ತೂಗಾಡುವವರನ್ನು ನೋಡಿ, ತಲೆಯನ್ನು ಬಗ್ಗಿಸಿ ಅವರು ನೇತಾಡುವ ಪರಿ

ನೋಡಿದರೆ ನಗು, ಅನುಕಂಪ ಎಲ್ಲಾ ಒಟ್ಟೊಟ್ಟಿಗೇ ನುಗ್ಗಿ ಬರುತ್ತದೆ. ಅಂತಹ ಪರಿಸ್ಥಿತಿಯಲ್ಲೂ ಒಂದು ಸಣ್ಣ ನಿದ್ರೆ ತೆಗೆಯುವವರು. ಹೀಗೆ ಮುಖ್ಯವಾಗಿ ನಾಲ್ಕು ವಿಭಾಗಗಳಾಯ್ತು. ಒಂದೆರಡು ಸಣ್ಣ ಪುಟ್ಟ ವಿಭಾಗ ಬಿಟ್ಟಿದ್ದೇನೆ. ಅದೇನು ಪದೇ ಪದೇ ಕಾಣಸಿಗುವುದಿಲ್ಲ. ಡ್ರೈವರನ ಹಿಂದೆ ಕಳ್ಳನಂತೆ. ಮುದುರಿಕೂಡುವ ವಿಭಾಗ, ಎಂಜಿನ್ನಿನ ಬಾನಟ್ ಮೇಲೆ ಗಣಪತಿಯಂತೆ ಕೂಡುವ ವಿಭಾಗ... ಇತ್ಯಾದಿ.

ಒಂದು ವಿಚಾರವನ್ನಂತೂ ಖಡಾ ಖಂಡಿತವಾಗಿ ಹೇಳಬಲ್ಲೆ. ಭಾರತೀಯ ಯೋಗಾಚಾರ್ಯ ಪತಂಜಲಿ ಮತ್ತೊಮ್ಮೆ ಹುಟ್ಟಬರಲೇಬೇಕು. ನಮ್ಮ ಬಸ್ಸುಗಳಲ್ಲಿ ಪ್ರಯಾಣಿಸಲೇಬೇಕು. ಯಾಕೇಂತೀರ, ಅಷ್ಟೂ ವರ್ಷದಿಂದ ಅವರ ''ಯೋಗಸೂತ್ರ''ಗಳು ಪರಿಷ್ಕಾರವಾಗಿಲ್ಲ. ಒಮ್ಮೆ ಹುಟ್ಟಿ ಬಂದರೆ ಈ ನಿದ್ರಾಭಂಗಿಗಳನ್ನು - ಬಸ್ಸಿನಲ್ಲಿ ಸ್ವತಃ - ಅಭ್ಯಾಸ ಮಾಡಿ, ಯೋಗ ಶಾಸ್ತ್ರಕ್ಕೆ ಮತ್ತಷ್ಟು ಆಸನಗಳನ್ನು ಸೇರಿಸಿ ಹೊಸ ಪರಿಷ್ಕೃತ ಆವೃತ್ತಿಯನ್ನು ಬರೆಯ ಬಹುದೆಂದೇ ನನ್ನ ಆಶಯ. ಒಂದೆರಡು ನಿದ್ರಾಯೋಗ ಭಂಗಿಗಳನ್ನು ನೋಡಿ, ಸಾಧಾರಣವಾಗಿ ಯಾರಿಗೂ ಮಾಡಲಾಗದ ನಿದ್ರಾಭಂಗಿಗಳಿವು. ತೊಡೆಗಳನ್ನು ಗಡಿಯಾರದ ಮುಳ್ಳುಗಳಂತೆ "V" ಆಕಾರದಲ್ಲಿ ಅಗಲಿಸಿ ಮೂಟೆಯಂತಹ ಹೊಟ್ಟೆ ದೇಹವನ್ನು ಅದರ ಮೇಲೆ ಅಮುಕಿ, ಕತ್ತನ್ನು ಹಿಂದಕ್ಕೆ ವಾಲಿಸಿ, ಬಾಯಿಬಿಟ್ಟು ಕೂತ ಶವಾಸನ, ಮೊಣ ಕಾಲುಗಳ ಮಧ್ಯೆ ತಲೆ ತೂರಿಸಿ, ಸೊಂಟ ಮುರಿದೇ ಹೋಯ್ತೇನೋ ಎಂಬಂತಹ ''ದೊಂಬರಾಸನ'', ಹಿಂದೆ ಮುಂದೆ, ಅಕ್ಕಪಕ್ಕ ಖಾಲಿ ಜಾಗ ಸಿಕ್ಕಲ್ಲಿ ಕೈ ಕಾಲು ತಲೆ ದೇಹ ತೂರಿಸಿ ಕೂರುವ ''ವಿಚಿತ್ರಾಸನ'' ಕಂಬಿಗಳನ್ನು ಹಿಡಿದು, ಹಿಮ್ಮಡಿ ಪಾದ, ಕೊನೆಗೆ ಹೆಬ್ಬೆಟ್ಟಿನ ಮೇಲೆ ನಿಲ್ಲುವ ''ಬ್ಯಾಲೆ ಆಸನ''

ಇಂತಾದ್ದನ್ನೆಲ್ಲಾ ಪರಿಷ್ಕರಿಸಲು ನಮ್ಮಂಥಾ ಪಾಮರರಿಂದ ಸಾಧ್ಯವೇ? ಆದ್ದರಿಂದಲೇ ''ಪತಂಜಲಿ ಮತ್ತೊಮ್ಮೆ ಹುಟ್ಟಿಬಾ'' ಎಂಬ ಹಾಡು. ಇತ್ತೀಚೆಗೆ ನನ್ನ ವೈದ್ಯಮಿತ್ರರೊಬ್ಬರಿಗೆ ಒಂದು ಹೊಸಾ ಥೆರಪಿ ಹೊಳೆದಿತ್ತು. ಅದೇ ''ಬಸ್ ಥೆರಪಿ''. ಇದರ ಬಗ್ಗೆ ಒಂದು ದೀರ್ಘವಾದ ವೈಜ್ಞಾನಿಕ ಲೇಖನವನ್ನು ಅವನೇ ಬರೆಯುತ್ತಾನೆ, ಕಾಯಿರಿ. ಆದರೆ ಅದರ ಮುಖ್ಯಾಂಶಗಳನ್ನು ಇಲ್ಲಿ ಹೇಳುವುದರಿಂದ, ಆತನ ಹೊಸಾ ಸಿದ್ಧಾಂತಕ್ಕೆ ನಾನೇನೂ ದ್ರೋಹ ಮಾಡಿದಂತಾಗದೆಂದು ನನ್ನ ಭಾವನೆ.

ಒಮ್ಮೆ ಜಯ ''ಗುಳು ಗುಳು'' ಅತ್ತಿದ್ದಳು. ತಪ್ಪು ತಿಳಿಯಬೇಡಿ. ''ಇವನೆಂಥಾ ಬೇಜವಾಬ್ದಾರಿ ಗಂಡ'' ಹೆಂಡತೀನ ಅಳಿಸ್ತಾನೇ ಇರ್ತಾನೆ'' ಎಂದು. ಅವಳ ಗುಳು

ಗುಳು ಅಳುವಿಗೆ ಕಾರಣ, ಅವಳ ಮಾತನ್ನು ನಾನು ಕೇಳುತ್ತಿಲ್ಲವೆಂದು, ಛೇ, ಮತ್ತೆ ಅಪಾರ್ಥಕ್ಕೇ ಹೋಯ್ತು.

''ನಾನು ಏನ್ಹೇಳಿದ್ರೂ, ನಿಮ್ಗಿವೀಗೆ ಬೀಳೊಲ್ಲ'' ಆಪಾದನೆ. ಆದರೆ ನಿಜ ಸಂಗತಿಯೆಂದರೆ, ನನ್ನಾಕೆಯ ಧ್ವನಿ, ಬಿಲದಲ್ಲಿ ಅಡಗಿ ಕುಳಿತು ಸದ್ದು ಮಾಡುವ ಇಲಿ ಸುಂಡದಂತೆ ಇತ್ತು. ಸರಿಯಾಗಿ ಕೇಳಿಸದು, ಆದರೆ ನಾನೇನೂ ಕೆಪ್ಪನಲ್ಲ. ದ್ರಾವಿಡ ಪ್ರಾಣಾಯಾಮ ಯಾಕೆ? ಜಯಳದೇಹ ದೊಡ್ಡದು. ಧ್ವನಿ ಅತೀ, ಅತೀ, ಅತೀ... ಚಿಕ್ಕದು ಅಷ್ಟೇ.

ಬಹುಶಃ ಯಾವ ವೈದ್ಯಶಾಸ್ತ್ರವೂ ಧ್ವನಿಯನ್ನು ಹೆಚ್ಚಿಸುವ ಚಿಕಿತ್ಸೆ ಹೊಂದಿಲ್ಲವೆಂಬ ಹುಂಬ ಧೈರ್ಯದಿಂದಲೇ ಜಯಳನ್ನು, ಹೇಳಿ ಕೇಳಿ ಬಲ್ಲ ಎಲ್ಲಾ ಡಾಕ್ಟರರ ಬಳಿ ಕರೆದೊಯ್ದಿದ್ದೆ, ಎಲ್ಲರೂ ತಾರಮ್ಮಯ್ಯಾ ಆಡಿಸಿದ್ದರು. ಕೊನೆಗೆ ಸಿಕ್ಕವನೇ ಈ ನನ್ನ ವೈದ್ಯಮಿತ್ರ. ಅವನ್ಹೇಳಿದ್ದೇ ಈ ''ಬಸ್ ಥೆರಪಿ''

''ನೋಡಿ ಸಿಸ್ಟರ್, ಇಲ್ಲಿವರ್ಗ್ಗೂ, ಇದ್ಕೆ ಯಾವ್ದೂ ಟ್ರೀಟ್‌ಮೆಂಟಿಲ್ಲ, ಆದ್ರೆ ನನ್ನ ಹೊಸಾ ಥೆರಪಿ ಪ್ರಕಾರ ಆರು ತಿಂಗ್ಳಲ್ಲೇ ಇದು ಸಾಧ್ಯ.''

ಜಯ ಕಣ್ಣು, ಬಾಯಿ, ಕಿವಿಯನ್ನು ಊರಗಲ ಮಾಡಿದಳು. ''ಯಾವ್ದಾದ್ರೂ ಡಬ್ಬಾಬಸ್ಸಿನಲ್ಲಿ, ಮುಂಭಾಗದಲ್ಲಿ ಕೂತು ಇವ್ನ ಜೊತೆ ಮಾತಾಡ್ತಾನೇ ಹೋಗಿ. ಆದ್ರೆ ಆವಾಗ ಬಸ್ಸು ಓಡ್ತಾ ಇರ್ಬೇಕು'' ಸಲಹೆ ಕೊಟ್ಟಿದ್ದ.

ಅಂದಿನಿಂದ ಜಯ ಡಬ್ಬಾ ಬಸ್ಸಿನ ಶಬ್ದದ ಜೊತೆ ಸ್ಪರ್ಧಿಸಿದಳು. ಈಗವಳ ಧ್ವನಿ ಮೂರು ಕೇರಿಯಾಚೆ ಕೇಳಿಸುತ್ತದೆ, ಅಂದಿನಿಂದ ನನ್ನ ವಿಳಾಸ ಕೇರಾಫ್ ''ಬೊಂ-ಬಾಯಿ ಜಯ'' ಎಂದರೇನೇ ಎಲ್ಲರಿಗೂ ತಿಳಿಯುವುದು. ಎಲ್ಲರ ದೃಷ್ಟಿ ಈಗ ನನ್ನ ಮೇಲೆ. ''ಅಯ್ಯೋಪಾಪ, ಆ ಬಾಯಿ ಇರೋ ಹೆಂಡ್ತಿ ಜೊತೆ ಹೇಗೆ ಏಗ್ತಾನಪ್ಪಾ?'' ಕನಿಕರದ ದೃಷ್ಟಿ, ನಿಮಗೆ ಕೈ ಮುಗಿಯುತ್ತೇನೆ. ದಯವಿಟ್ಟು ಜಯಳ ಮುಂದೆ ಇದನ್ನು ಹೇಳಬೇಡಿ.

ಹೇಗಿದೆ ನನ್ನ ಮಿತ್ರನ ''ಬಸ್ ಥೆರಪಿ''

ಈ ಬಸ್ ಥೆರಪಿಯ ಒಂದೆರಡು ಸ್ಯಾಂಪಲನ್ನು ನಿಮಗೆ ಹೇಳಲೇಬೇಕು. ಉಳಿದದ್ದು ನನ್ನ ಮಿತ್ರನ ಪುಸ್ತಕದಲ್ಲಿ ದೊರೆಯುತ್ತದೆ. ಪುಸ್ತಕದ ಬಿಡುಗಡೆ ದಿನಾಂಕ ನಿರೀಕ್ಷಿಸಿ.

ನಿದ್ರೆ ಬರದ ರೋಗಿಗಳಿಗೆ ''ಆಹಾ, ಓಹೋ'' ವಿಭಾಗದಲ್ಲಿ ಪ್ರಯಾಣಿಸಲು ಹೇಳುತ್ತಾನೆ. ಸುಖ ಪ್ರಯಾಣದಲ್ಲಿ ಅವರಿಗೆ ನಿದ್ದೆ ಗ್ಯಾರಂಟಿ. ಹಾಗೆಯೇ ಅತಿ ನಿದ್ರಾ ರೋಗಿಗಳಿಗೆ ''ಧನುರ್ವಾಯು'' ವಿಭಾಗದಲ್ಲಿ ಪ್ರಯಾಣಿಸಲು

ಹೇಳುತ್ತಾನೆ. ಎಂತಹ ಕುಂಭಕರ್ಣರೂ ಎಚ್ಚರವಾಗುವ ಅದುರಾಟದಲ್ಲಿ, ಅವರಿಗೆ ನಿದ್ರೆಯೇ ಬರದು.

ಇನ್ನು ಕೈಕಾಲು ವಾತರೋಗದಿಂದ ಹಿಡಿದುಕೊಂಡರೆ ಬಾವಲಿ ವಿಭಾಗದಲ್ಲಿ ಸೂಕ್ತ ಥೆರಪಿ ಗ್ಯಾರಂಟಿ. ಆದರೆ ಅತೀ ಎಚ್ಚರಿಕೆಯಿರಲಿ.

ನಿಮ್ಮ ನಿಮ್ಮ ರೋಗಕ್ಕನುಗುಣವಾಗಿ, ಯಾವ ವಿಭಾಗ, ಯಾವ ಬಸ್ಸು, ಎಲ್ಲಿಂದ ಎಲ್ಲಿಗೆ ಹೋಗುವ ಬಸ್ಸು, ಮುಂತಾದ ಸಮಸ್ತ ವಿವರಗಳೂ ನನ್ನ ವೈದ್ಯ ಮಿತ್ರನಲ್ಲಿದೆ, ಅದೇ ಅವನು ನಿಮಗೆ ಕೊಡುವ ಪ್ರಿಸ್ಕ್ರಿಪ್ಷನ್. ಅದಿಲ್ಲದೇ, ನೀವೇ ಸ್ವಂತ ಥೆರಪಿ ಮಾಡಿಕೊಂಡು ಅನಾಹುತ ಮಾಡಿಕೊಂಡರೋ, ನಾನು ಜವಾಬ್ದಾರನಲ್ಲ. ನಿಮಗೆ ಬೇಕಾದರೆ ಒಂದು ತಿಂಗಳ ಮೊದಲೇ ಅವನ ಅಪಾಯಿಂಟ್‌ಮೆಂಟನ್ನು ತೊಗೊಳ್ಳಿ, ಗ್ಯಾರಂಟಿ ವಾಸಿಯಾಗುತ್ತದೆ. ಅದಕ್ಕೆ ನಾನು, ಜಯ ಗ್ಯಾರಂಟಿ.

ಈಗ ಮನ ಬಿಚ್ಚಿ ಹೇಳಿ, ಈ ವಿಷಯ, ಅಲ್ಪ ವಿಷಯವೇ? ''ಬಸ್ ಪ್ರಯಾಣವೂ - ನಿದ್ರಾ ಪುರಾಣವೂ'' ಎಂಬುದು ಒಂದು ಗಹನವಾದ ವಿಚಾರವಲ್ಲವೇ?



ನೀನ್ ಡಯಟ್ ಮಾಡ್ಬೇಕಾದ್ರೆ, ನಾನ್ಯಾಕೇ ದಿನಾಲೂ ಸೂಪ್ ಕುಡೀಬೇಕೂ?

ಹಾಸ್ಯಬ್ರಹ್ಮ ಮತ್ತು ಅಪರಂಜಿ ವೇದಿಕೆ

ಬೀchi ಯವರ ಸಂಸ್ಮರಣೆ
ಮತ್ತು ಹಾಸ್ಯೋತ್ಸವ - ೯೯

ಪಾಲ್ಗೊಳ್ಳುವವರು:
ಮಾಸ್ಟರ್ ಹಿರಣ್ಣಯ್ಯನವರು
ಮೇಕಪ್ ನಾಣಿ ಮತ್ತು ತಂಡದವರು
ನಾಗೇಂದ್ರಶಾ ಮತ್ತು ಕಾಶಿ
ಜಿ.ವಿ. ಅತ್ರಿ ಮತ್ತು ಸಹ ಗಾಯಕರು
ಬಿ.ಆರ್. ಲಕ್ಷ್ಮಣರಾವ್, ಎಂ.ಎನ್. ವ್ಯಾಸರಾವ್
ಶ್ರೀಮತಿ ಯಮುನಾ ಮೂರ್ತಿ
ವೈ.ವಿ. ಗುಂಡುರಾವ್
ದುಂಡಿರಾಜ್, ಬೇಲೂರು ರಾಮಮೂರ್ತಿ
ಹಾಗೂ ಗಾನ ವಿನೋದಿನಿ ತಂಡದಿಂದ ಹಾಸ್ಯರಂಜನೆ
ಉಸ್ತುವಾರಿ ಅ.ರಾ. ಮಿತ್ರ

ಹೆಚ್ಚಿನ ವಿವರಗಳು: ಮುಂದಿನ ಸಂಚಿಕೆಯಲ್ಲಿ
ಸ್ಥಳ: **ಹೆಚ್.ಎನ್. ಕಲಾಕ್ಷೇತ್ರ**, ಜಯನಗರ
ದಿನಾಂಕ: 25-12-1999
ಸಮಯ: ಬೆಳಿಗ್ಗೆ 10-30 ರಿಂದ ಸಾಯಂಕಾಲದವರೆಗೆ

ಅಪ್ರಸ್ತುತ ಪ್ರಸಂಗಿಯ ಪ್ರಶ್ನೆಗಳು

– ಕು.ಗೋ.

ಅಷ್ಟಾವಧಾನ ಕಾರ್ಯಕ್ರಮದಲ್ಲಿ ಎಂಟು ಪೃಚ್ಛಕರಲ್ಲಿ ಅಪ್ರಸ್ತುತ ಪ್ರಸಂಗಿ ಎಂಬ ಒಬ್ಬ ಅಧಿಕ ಪ್ರಸಂಗಿಯೂ ಇರುತ್ತಾನೆ. ಗಹನವಾದ ಸಮಸ್ಯೆಗಳಿಗೆ ಉತ್ತರ ಹುಡುಕುತ್ತಿರುವ ಸಮಯದಲ್ಲಿ ಅಷ್ಟಾವಧಾನಿಯ ಗಮನ ಸೆಳೆಯಲು ಹಾಗೂ ಸ್ವಲ್ಪ ಹಾಸ್ಯ ಪ್ರಧಾನವಾದ ಪ್ರಶ್ನೆಗಳನ್ನು ಹಾಕಿ ಶ್ರೋತೃಗಳ ಬಿಗು ನರಗಳನ್ನು ಸಡಲಿಸುವ ಕೆಲಸವನ್ನು ಈತ ಮಾಡುತ್ತಾನೆ. ಅಷ್ಟಾವಧಾನಿಯೂ ಸ್ವಲ್ಪ ಹಾಸ್ಯಪ್ರಜ್ಞೆ ಉಳ್ಳವನಾದರೆ ಈ ಪ್ರಶ್ನೆಗಳಿಗೆ ವಿನೋದವಾಗಿಯೇ ಉತ್ತರಿಸಿ ಜನರನ್ನು ರಂಜಿಸುತ್ತಾನೆ. ಈಚೆಗೆ ನಾನು ಭಾಗವಹಿಸಿದ ಒಂದು ತುಳು ಅಷ್ಟಾವಧಾನದಲ್ಲಿ ಅಷ್ಟಾವಧಾನಿಯ ಮುಂದಿಟ್ಟ ಕೆಲವು ಪ್ರಶ್ನೆಗಳನ್ನು ಕನ್ನಡದಲ್ಲಿ ಭಾಷಾಂತರಿಸಿ ನಿಮ್ಮ ಮುಂದಿಟ್ಟಿದ್ದೇನೆ. ಈ ಪ್ರಶ್ನೆಗಳಿಗೆ ಅಷ್ಟಾವಧಾನಿ ಯಾವ ರೀತಿಯ ಉತ್ತರ ಕೊಟ್ಟಿರಬಹುದೆಂಬುದಕ್ಕಿಂತಲೂ ಹಾಸ್ಯಪ್ರಜ್ಞೆಯುಳ್ಳ ಓದುಗರು ಇವುಗಳಿಗೆ ಯಾವ ತರದ ಉತ್ತರ ಕೊಟ್ಟಾರೆಂಬುದು ಮುಖ್ಯವಾಗಿದೆ.

1. ನೀವು ಇಷ್ಟು ಪುಟಪುಟವಾಗಿ, ಕೆಂಪು ಕೆಂಪಾಗಿ ಸುಂದರ ರಾವಣನ ಹಾಗೆ ಇದ್ದೀರಲ್ಲಾ. ನೀವು ಹೊಟ್ಟೆಗೆ ಏನು ತೆಗೆದುಕೊಳ್ಳುತ್ತೀರಿ?
2. 'ನಾನು ಬಾರೀ ಕುಶಿಯಲ್ಲಿ ಇದ್ದೇನೆ' ಎಂದು ಹೇಳುವ ಯಾರಾದರೂ ನಿಮಗೆ ಸಿಕ್ಕಿದ್ದಾರಾ? ಸಿಕ್ಕಿದ್ದರೆ ಅವರಾರು, ಎಲ್ಲಿದ್ದಾರೆ?
3. ನಮ್ಮ ಜನರಿಗೆ ಒಬ್ಬ ಮುಳುಗುವುದನ್ನು ನೋಡುವುದೂಂದ್ರೆ ತುಂಬ ಆಸಕ್ತಿ ತುಂಬ ಆಸೆ. ಆದರೆ ಅದೇ ಒಬ್ಬ ಮೇಲೆ ಬರುವುದನ್ನು ನೋಡಲು ಕುತೂಹಲವೇ ಇರೋಲ್ಲವಲ್ಲಾ. ಯಾಕೆ?
4. ಒಂದು ಕೈಯಲ್ಲಿ ಟೀ, ಇನ್ನೊಂದು ಕೈಯಲ್ಲಿ ಪೇಪರ್, ಎದುರಿನಲ್ಲಿ ಟಿ.ವಿ.ಯಲ್ಲಿ ಚಿತ್ರಗೀತೆ, ರೇಡಿಯೋದಲ್ಲಿ ಶಾಸ್ತ್ರೀಯ ಸಂಗೀತ, ಒಳಗಿನಿಂದ ಹೆಂಡತಿಯ ಪಿರಿಪಿರಿ, ಬಳಿಯಲ್ಲಿ ಮಕ್ಕಳ ಕಿರಿಕಿರಿ, ಕಾಲಡಿಯಲ್ಲಿ ಬೆಕ್ಕು, ತಲೆ ಬಳಿಯಲ್ಲಿ ಹಲ್ಲಿ, ಫ್ಯಾನಿನ ಗಡ್‌ಬಡ್, ಫೋನಿನ ಟ್ರಿಣ್-ಟ್ರಿಣ್ - ಇದು ಅಷ್ಟಾವಧಾನವಾ, ಕಷ್ಟಾವಧಾನವಾ, ನಷ್ಟಾವಧಾನವಾ?
5. 'ಈರೊಂತೆ ಪೊಕ್ಕಡೆ ಕುಲ್ಲುವರಾ...''

   (ನೀವು ಸ್ವಲ್ಪ ಸುಮ್ಮನೆ ಕುಳಿತುಕೊಳ್ಳುತ್ತೀರಾ) - ಈ ತುಳು ನಾಟಕ ಯಾವಾಗ ಬಂದೀತು?

6. ಭೂತದ ಕೋಲಾದ ಸಮಯ, ದೇವಸ್ಥಾನದಲ್ಲಿ ದರ್ಶನದ ಸಮಯ ದರ್ಶನ ಪಾತ್ರಿಯಲ್ಲಿ ಏನಾದರೂ ಪ್ರಶ್ನೆ ಕೇಳಿದರೆ 'ನಿನ್ನ ಆಸೆ ಈಡೇರಿಸಿದರೆ ನನಗೇನು ಕೊಡ್ತೀ' ಅಂತ ಕೇಳುತ್ತಾರಲ್ಲಾ ಇದು ಯಾವ ರೋಗ?

7. ಆದಿತ್ಯ, ಸೋಮ, ಮಂಗಳ, ಬುಧ, ಗುರು, ಶುಕ್ರ, ಶನಿ ಇವರೆಲ್ಲ ಒಟ್ಟಿಗೆ ಒಂದೆಡೆ ಎಲ್ಲಿ ಸಿಗುತ್ತಾರೆ?

8. ಸಿಂಗಾರಹೂ, ತೀರ್ಥ, ಗಂಧ, ಕುಂಕುಮ, ವಾದ್ಯ, ಡೋಲು, ಗರ್ನಾಲು ಇವು ಯಾವುವೂ ಇಲ್ಲದೆ ಒಬ್ಬ ಮನುಷ್ಯನಿಗೆ ನಡುಕ ಬರಿಸಬೇಕಾದರೆ ಏನು ಮಾಡಬೇಕು?

9. ನಮ್ಮ ದೇಶದಲ್ಲಿ ಯಾರನ್ನೆಲ್ಲಾ ನೀರಿನಲ್ಲಿ ಮೂರು ಸಾರಿ ಮುಳುಗಿಸಿ ಎರಡೇ ಬಾರಿ ಮೇಲಕ್ಕೆ ಎತ್ತಬೇಕು!

10. ಈ ವಿಶಾಲವಾದ ವಿಶ್ವದಲ್ಲಿ, ಈ ಸಮೃದ್ಧವಾದ ದೇಶದಲ್ಲಿ ನಿಂಗ, ಭೂತ, ದೇವರು, ದಿಂಡರು ಇರುವ ಈ ಮಣ್ಣಿನಲ್ಲಿ ಪಶುಪಕ್ಷಿ ಜಂತು ಜಾನುವಾರು ಕಾಡುಮೇಡು ತೋಡು ಹೊಳೆ ಸಮುದ್ರದ ಮಧ್ಯದಲ್ಲಿ ಆದಷ್ಟು ಸುಖವಾದ ಜೀವನ ನಡೆಸುವ ಅವಕಾಶವಿದ್ದರೂ ನಮ್ಮ ಮನುಷ್ಯ ಜೀವಿ ತಲೆಯಮೇಲೆ ಕೈ ಹೊತ್ತು ಮುಖ ಗಂಟು ಹಾಕಿಕೊಂಡು, ಒಬ್ಬರನ್ನೊಬ್ಬರು ತಿನ್ನುತ್ತಾ ಮೆರೆಯುವುದಕ್ಕೆ ಕಾರಣವಾದರೂ ಏನು?

11. ಇಲ್ಲಿ ನಿಮ್ಮ ಅಷ್ಟಾವಧಾನ ಆಗುತ್ತಿರುವಾಗ ಆಚಿನ ಹಾಲ್‌ಗೆ ವೈಜಯಂತಿ ಮಾಲಾ - ಬೇಡ - ಅವರಿಗೆ ವಯಸ್ಸಾಗಿದೆ. ಮಾಧುರಿ ದೀಕ್ಷಿತ್ ದಿಢೀರ್ ಬರುತ್ತಾನೆ ಅಂತ ಇಟ್ಟುಕೊಳ್ಳಿ. ಆಗ ಇಲ್ಲಿ ಎಷ್ಟು ಜನವಿರಬಹುದು?

12. ನಿಮಗೆ ಸುಲಿದ ಬಾಳೆಯ ಹಣ್ಣು ಇಷ್ಟವಾ ಅಥವಾ ಸಿಪ್ಪೆ ಇರುವ ಬಾಳೆಯ ಹಣ್ಣು ಇಷ್ಟವಾ?

13. ಒಂದು ಸಣ್ಣ ಲೆಕ್ಕ. ಒಬ್ಬ ತಂದೆ ಅವರ ಮಗನಿಗೆ ನೂರು ರೂಪಾಯಿ ಕೊಡುತ್ತಾರೆ. ಹಾಗೆಯೇ ಇನ್ನೊಬ್ಬ ಅಪ್ಪ ಅವರ ಮಗನಿಗೆ ಐವತ್ತು ರೂಪಾಯಿ ಕೊಡುತ್ತಾರೆ. ಹೀಗೆ ಕೊಟ್ಟ ಹಣ ಮಗಂದಿರ ಕೈಯಲ್ಲಿ ಒಟ್ಟು ನೂರೇ ರೂಪಾಯಿ ಇರುತ್ತದೆ. ಇದು ಹೇಗೆ!

14. ಉಡುಪಿಯಿಂದ ಎಂ.ಜಿ.ಎಂ. ಕಾಲೇಜಿಗೆ ಸಿಟಿ ಬಸ್ಸಿನಲ್ಲಿ ಕುಳಿತು ಬರುವಾಗ ನಿಮ್ಮ ತಲೆ ಎಷ್ಟು ಬಾರಿ ಬಸ್ಸಿನ ಟಾಪಿಗೆ ತಗಲಿರಬಹುದು?

15. ನಿಮ್ಮದು ಪಾಣಿಗ್ರಹಣವಾ, ಪ್ರಾಣಿಗ್ರಹಣವಾ?

16. ಮಾತೃಪಕ್ಷ ಮೊದಲಾ ಅಥವಾ ಪಿತೃಪಕ್ಷ?

17. ಕೆಲವು ಪದಗಳ ಅರ್ಥ ಓಗಿದೆ?

ಗೋಬ್ರಾಹ್ಮಣ - ಬ್ರಾಹ್ಮಣನೇ ಹೋಗು

ನಾಗರಿಕ - ನಗಾರಿ ಬಾರಿಸುವವ

ಕಂತುಪಿತ - ಕಂತು ಕಟ್ಟಿ ಮುಳುಗುವ ತಂದೆ

ಬಡ್ಡೀಮಗ - ಬಡ್ಡಿಯ ದುಡ್ಡಿನಲ್ಲಿ ಬೆಳೆದ ಮಗ

ಯಾವ ನಿಘಂಟಿನಲ್ಲಿ ಇಂಥ ಅರ್ಥಗಳು ಸಿಗುತ್ತವೆ?


18. ಹತ್ತು ತಲೆ ಕೆಂಪಾತನ, ಆರುತಲೆ ಕಪ್ಪಾತನ ಸಖಿನ ಸುತನ ಸ್ವಾಮಿಯ ಮಡದಿಯ ಕದ್ದೊಯ್ದವನಾರು? ಯಾರು ಹೇಳಿ.

19. ಕೆಲವು ಸಂಸ್ಕೃತ ಮಂತ್ರದಲ್ಲಿ ನಶ್ಯ, ಚಾ, ರಂ ಎಲ್ಲ ಸಿಗುತ್ತದೆ, ಅವು ಯಾವುವು?

20. ಹುಚ್ಚರು ಹುಚ್ಚಾಸ್ಪತ್ರೆಯ ಒಳಗೆ ಜಾಸ್ತಿಯಾ ಅಥವಾ ಹೊರಗೆಯಾ?

21. ಮುಂದಿನ ಜನ್ಮದಲ್ಲೂ ಈ ಜನ್ಮದ ಗಂಡನ ಹೆಂಡತಿಯಾಗಿಯೇ ಇರುವಂತಾಗಲು ಕೆಲವು ಪತಿವ್ರತೆಯರು ಬಯಸುತ್ತಾರೆ. ಪಾಪ ಆ ಗಂಡಂದಿರಿಗೆ ಸ್ವಲ್ಪ ವೆರೈಟಿ ಬೇಡವೇ?

22. ನೀವು ಯಾವುದಾದರೂ ಹಾಸ್ಯ ಪುಸ್ತಕ ಓದಿದ್ದೀರಾ? ಹೋಗಲಿ 'ಅಪರಂಜಿ' ಎಂಬ ಹಾಸ್ಯ ಪತ್ರಿಕೆಯ ಚಂದಾದಾರರಾದರು ಆಗಿದ್ದೀರಾ?





ಶ್ರೀಮತಿ ಶಾಂತಾ ಮತ್ತು ಶ್ರೀ ಸಿ. ಆರ್. ರಘು

ಇವರ ಸವಿನೆನಪಿಗೆ

ಪೂರ್ಣಿಮಾ ರಘು ಗೌಡ – ಸುಧೀರ್‌ಗೌಡ

ಶ್ರೀಹರಿ ಕಡಾಂಬಿ.

Printed by V.R. NATH for the Publisher M. SHIVAKUMAR, Published and owned by M. SHIVA KUMAR, 36, 6th Main Road, Malleswaram Bangalore - 560 003. Printed at RAVI GRAPHICS, 62, 4th Cross, SSI Area, Rajajinagar, Bangalore 560 010.